01-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026-27 ರ ಎಸ್. ಎಸ್. ಎಲ್. ಸಿ. ಮಾದರಿ ಪ್ರಶ್ನೆಪತ್ರಿಕೆ 3 ಕ್ಕೆ ಮಾದರಿ ಉತ್ತರಗಳು

2026-27 SSLC MODEL QUESTION PAPRER 3 MODEL ANSWERS

ವಿಷಯ ಸಂಕೇತ : **01-K** **Subject Code : 01-K**

ವಿಷಯ : ಪ್ರಥಮ ಭಾಷೆ — **ಕನ್ನಡ**

Subject : First Language — KANNADA

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 100] [Max. Marks : 100

[Turn over

I. ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : **6 X 1 = 6**

1. ವರ್ಗೀಯ ವ್ಯಂಜನದ ಪ್ರಥಮ ಹಾಗೂ ತೃತೀಯಾಕ್ಷರಗಳು
   (ಎ) ಅನುನಾಸಿಕಗಳು (ಬಿ) ಅಲ್ಪಪ್ರಾಣಾಕ್ಷರಗಳು
   (ಸಿ) ಯೋಗವಾಹಗಳು (ಡಿ) ಮಹಾಪ್ರಾಣಾಕ್ಷರಗಳು

ಉತ್ತರ : (ಬಿ) ಅಲ್ಪಪ್ರಾಣಾಕ್ಷರಗಳು

2. 'ಅಷ್ಟೈಶ್ವರ್ಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
   (ಎ) ವೃದ್ಧಿ (ಬಿ) ಯಣ್
   (ಸಿ) ಜಶ್ತ್ವ (ಡಿ) ಶ್ಚುತ್ವ

ಉತ್ತರ : (ಎ) ವೃದ್ಧಿ

3. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ ಬಳಸುವ ಲೇಖನ ಚಿಹ್ನೆ
   (ಎ) ಪೂರ್ಣವಿರಾಮ (ಬಿ) ಅಲ್ಪವಿರಾಮ
   (ಸಿ) ಅರ್ಧವಿರಾಮ (ಡಿ) ಭಾವಸೂಚಕ

ಉತ್ತರ : (ಬಿ) ಅಲ್ಪವಿರಾಮ

4. ಭೂತಕಾಲ ಸೂಚಕ ಪ್ರತ್ಯಯವಿದು
   (ಎ) ದ (ಬಿ) ವ
   (ಸಿ) ಉತ್ತ (ಡಿ) ಉವ

ಉತ್ತರ : (ಎ) ದ

5. 'ಕರಣಾರ್ಥ' ಎಂಬುದು ಈ ವಿಭಕ್ತಿಯ ಕಾರಕಾರ್ಥ
   (ಎ) ಚತುರ್ಥೀ (ಬಿ) ದ್ವಿತೀಯಾ
   (ಸಿ) ಪಂಚಮೀ (ಡಿ) ತೃತೀಯಾ

ಉತ್ತರ : (ಡಿ) ತೃತೀಯಾ

6. 'ಇಮ್ಮಾವು' ಪದವು ಈ ಸಮಾಸಕ್ಕೆ ಸೇರಿದೆ
   (ಎ) ದ್ವಿಗು (ಬಿ) ಅಂಶಿ
   (ಸಿ) ಕರ್ಮಧಾರಯ (ಡಿ) ತತ್ಪುರುಷ

ಉತ್ತರ : (ಸಿ) ಕರ್ಮಧಾರಯ

II. ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) : **4 X 1 = 4**

7. ವ್ಯಯ : ಬೀಯ : : ಪ್ರಾಣ : ..... .

ಉತ್ತರ : ಹರಣ

8. ಹನ್ನೆರಡು : ಸಂಖ್ಯಾವಾಚಕ : : ಮೂಡಣ : ..... .

ಉತ್ತರ : ದಿಗ್ವಾಚಕ

9. ಬೆಟ್ಟಗುಡ್ಡ : ಜೋಡುನುಡಿ : : ಮೆಲ್ಲಮೆಲ್ಲನೆ : ..... .

ಉತ್ತರ : ದ್ವಿರುಕ್ತಿ

10. ಬಳೆಗಾರ : ತದ್ಧಿತಾಂತ ನಾಮ : : ನನಗೋಸ್ಕರ : ..... .

ಉತ್ತರ : ತದ್ಧಿತಾಂತಾವ್ಯಯ

III. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) : **7 X 1 = 7**

11. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು?

ಉತ್ತರ : ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ನಯಸೇನ.

12. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?

ಉತ್ತರ : ಹಸಿದು ಮಲಗಿದ್ದ ಹುಲಿಯು ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

13. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?

ಉತ್ತರ : 'ಚೇರಿಂಗ್ ಕ್ರಾಸ್' ಎಂಬುದು ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಲಂಡನ್ ನಗರದ ಓಣಿಯಾಗಿದೆ.

14. ಕೌಸಂಬಿಯ ಅರಸ ಯಾರು?

ಉತ್ತರ : ಕೌಸಂಬಿಯ ಅರಸ ಅತಿಬಳ.

15. ಹಲಗಲಿ ಗ್ರಾಮ ಎಲ್ಲಿದೆ?

ಉತ್ತರ : ಹಲಗಲಿ ಗ್ರಾಮವು ಮುಧೋಳ ಸಂಸ್ಥಾನದಲ್ಲಿದ್ದು ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.

16. ದ್ರೋಣನು ಪರುಶುರಾಮರಲ್ಲಿಗೆ ಏಕೆ ಬಂದನು?

ಉತ್ತರ : ದ್ರೋಣನು ಪರಶುರಾಮರಲ್ಲಿಗೆ ದ್ರವ್ಯವನ್ನು (ಸಂಪತ್ತನ್ನು) ಬೇಡುವುದಕ್ಕಾಗಿ ಬಂದನು.

17. ಒಡೆಯನ ಮನೆ ಅಂಗಳದಲ್ಲಿ ಮಾವಿನ ಮರಗಳು ಹೇಗೆ ಬೆಳೆದು ನಿಂತಿವೆ?

ಉತ್ತರ : ಒಡೆಯನ ಮನೆ ಅಂಗಳದಲ್ಲಿದ್ದ ಮಾವಿನ ಮರಗಳು ಮೈತುಂಬಿ ನಿಂತಿವೆ.

IV. ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

10 X 2 = 20

18. ಲಿಪಿಯ ಜಾಡು ಹೇಗೆ ಆರಂಭಗೊಂಡಿತು?

ಉತ್ತರ : ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಮೊದಲು ಮಾಡಿದಂದಿನಿಂದ ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಉಂಟಾಯಿತು. ಓದು ಬರೆಹವಿಲ್ಲದ ಹಳ್ಳಿಯ ಕೆಲಸಗಾರನು ಕೂಡ ತಾನು ದಿನಗೆಲಸಕ್ಕೆ ಹೋದ ಲೆಕ್ಕವನ್ನು ಗೋಡೆಯ ಮೇಲೆ ದಿನಂಪ್ರತಿ ಒಂದೊಂದು ಗೆರೆ ಎಳೆದು ಗುರುತಿಸಿ, ಲೆಕ್ಕಹಾಕಿ ಸಂಬಳವನ್ನು ಪಡೆಯುತ್ತಾನೆ. ಹಾಲು ಮಾರುವವರೂ ಹೀಗೆಯೇ ಲೆಕ್ಕವಿಡುವುದುಂಟು. ಪುರಾತನ ಸುಮೆರ್, ನೈಲ್, ಕ್ರಿಟಗಿರಿ ಇತ್ಯಾದಿ ಪ್ರದೇಶಗಳಲ್ಲಿ ಈ ಬಗೆಯ ಲಿಪಿ ಸಾಕ್ಷ್ಯಗಳು ದೊರೆತಿವೆ. ಹೀಗೆ ಲಿಪಿಯ ಜಾಡು ಆರಂಭಗೊಂಡಿತು.

19. ಸ್ವಯಂ ಚಾಲಿತ ಬಾಗಿಲುಗಳ ಅನ್ವೇಷಣೆಯಲ್ಲಿ ವಿಶ್ವೇಶ್ವರಯ್ಯನವರ ಕೊಡುಗೆ ಕುರಿತು ಬರೆಯಿರಿ.

ಉತ್ತರ : ವಿಶ್ವೇಶ್ವರಯ್ಯನವರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸುವ ಮೂಲಕ ಯಶಸ್ವಿಯಾದರು. ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು. ಇದನ್ನೇ ಮುಂದೆ ಗ್ವಾಲಿಯರ್‌ನ ತಿಗ್ರಾ ಜಲಾಶಯಕ್ಕೂ ಮೈಸೂರಿನ ಕೃಷ್ಣರಾಜಸಾಗರ (ಈಗಿನ ಮಂಡ್ಯಜಿಲ್ಲೆಯ) ಜಲಾಶಯಕ್ಕೂ ಅಳವಡಿಸಲಾಯಿತು.

20. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?

ಉತ್ತರ : ಲಂಡನ್ನಿನಲ್ಲಿ ಹೆಣ್ಣು ಮಕ್ಕಳು ಧರಿಸುವ ಟೊಪ್ಪಿಗೆಯನ್ನು ಲೇಖಕರು ಕುತೂಹಲದಿಂದ ನೋಡುತ್ತಾರೆ. "ಇಲ್ಲಿನ ಹೆಣ್ಣು ಮಕ್ಕಳು ಧರಿಸುವ ಟೊಪ್ಪಿಗೆಗಳು ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ. ಕೋಟ್ಯವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ನಾವು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೇ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ" ಎಂದು ಟೊಪ್ಪಿಗೆಯ ವಿಶೇಷತೆಯನ್ನು ದಾಖಲಿಸಿದ್ದಾರೆ.

21. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲು ಕಾರಣವೇನು?

ಉತ್ತರ : ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರು ತನ್ನ ಸಹೋದರಿಯ ಮಕ್ಕಳು, ಸೋದರಳಿಯಂದಿರು ಎಂದು ತಿಳಿದಿದ್ದರೂ ಅವರಿಗೆ ಸಲುಗೆಯನ್ನು ಕೊಡಬಾರದೆಂದು ತಾನು ಸೋದರಮಾವನೆಂದು ತಿಳಿಸಲಿಲ್ಲ. ಅವರು ಈಗಾಗಲೇ ತಂದೆ ಕೊಟ್ಟ ಸಲುಗೆಯಿಂದ ಯಾವ ವಿದ್ಯೆಯನ್ನು ಕಲಿಯದೆ ಸಪ್ತವ್ಯಸನಗಳಿಗೆ ತುತ್ತಾಗಿ ಕೆಟ್ಟು ಹೋಗಿದ್ದರು. ತಾನು ಅವರ ಸೋದರ ಮಾವನೆಂದು ತಿಳಿದರೆ ಇಲ್ಲಿಯೂ ಅದೇ ಸಲುಗೆಯಿಂದ ಕೆಟ್ಟು ಹೋಗಬಹುದು. ತನ್ನ ಸೋದರಳಿಯರನ್ನು ಯೋಗ್ಯರನ್ನಾಗಿ ಮಾಡುವ ಉದ್ದೇಶದಿಂದ ಸತ್ಯವನ್ನು ಮರೆಮಾಚಿದನು. ಅತಿ ಕಟ್ಟುನಿಟ್ಟಿನಿಂದ ಅವರನ್ನು ಎಲ್ಲ ವಿದ್ಯೆಗಳಲ್ಲಿ ಅರ್ಹರನ್ನಾಗಿ ಮಾಡಿದನು. ವಿದ್ವಾಂಸರಾದ ಬಳಿಕ ಸತ್ಯವನ್ನು ತಿಳಿದರೆ ಏನೂ ತೊಂದರೆ ಇಲ್ಲವೆಂದು ಭಾವಿಸಿ ಅವರಿಗೆ ತಾನು ಅವರ ಮಾವನೆಂದು ತಿಳಿಸಿದನು.

22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?

ಉತ್ತರ : ಕಾಲವೆಂಬ ಹಕ್ಕಿಯು ಆಕಾಶ, ಮೋಡ, ಭೂಮಂಡಲಗಳ ಎಲ್ಲಾ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡಿದೆ. ಆಕಾಶದಲ್ಲಿರುವ ಮುಗಿಲಿಗೆ ರೆಕ್ಕೆಗಳೊಡೆದವೋ ಎಂಬಂತೆ, ಆಕಾಶದಲ್ಲಿ ಮಿನುಗುತ್ತಿರುವ ಚಿಕ್ಕೆಗಳ ಮಾಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು, ಅಕಾಶದಲ್ಲಿ ಬೆಳಗುತ್ತಿರುವ ಸೂರ್ಯಚಂದ್ರರನ್ನು ಕಣ್ಣುಗಳಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿ ಹೋಗುತ್ತಿದೆ ಎಂದು ಕವಿ ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?

ಉತ್ತರ : ಕ್ರಿ. ಶ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ಹೊಡಿಸಿತು. ಶಸ್ತಾಸ್ತ್ರಗಳನ್ನು ನೀಡಿದರೆ ತಮ್ಮ ಮೂಲ ಕಸುಬಾದ ಬೇಟೆಗಾರಿಕೆಗೆ ತೊಂದರೆಯಾಗುತ್ತದೆ ಮತ್ತು ಗುಲಾಮಗಿರಿಯನ್ನು ಒಪ್ಪಿದಂತಾಗುತ್ತದೆ ಎಂಬುದನ್ನು ಅರಿತು ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಹಲಗಲಿಯ ಬೇಡರು ದಂಗೆ ಎದ್ದರು.

24. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಮಾರಣಹೋಮದಿಂದ ತೆಗೆದುಕೊಂಡ ನಿರ್ಧಾರವನ್ನು ತಿಳಿಸಿ.

ಉತ್ತರ : ಜಲಿಯನ್ ವಾಲಾಬಾಗ್ ಮಾರಣಹೋಮ ಭಗತ್‌ಸಿಂಗ್‌ನ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರಿತ್ತು. ಒಂದಲ್ಲ ಒಂದು ದಿನ ಈ ದಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು ಏನನ್ನಾದರೂ ಮಾಡಿಯೇ ತೀರುತ್ತೇನೆ. ಆಗ ಕ್ರೂರ ಬ್ರಿಟಿಷ್ ಆಳ್ವಿಕೆ ಅಂತ್ಯವಾಗುತ್ತದೆ ಎಂದು ತಿಳಿದಿದ್ದ ಭಗತ್‌ಸಿಂಗ್ ಮುಂದೆ ಕ್ರಾಂತಿಕಾರಿಗಳ ಸಹಕಾರದಿಂದ ಮಾತೃಭೂಮಿಯನ್ನು ಗುಲಾಮಗಿರಿಯ ಸಂಕೋಲೆಯಿಂದ ಬಿಡಿಸಲು ಸ್ವಾತಂತ್ರ್ಯ ಹೋರಾಟದ ಪಥದಲ್ಲಿ ಮುನ್ನಡೆಯುವ ನಿರ್ಧಾರವನ್ನು ತೆಗೆದುಕೊಂಡನು.

25. ಗಾಂಧೀಜಿಯವರು 'ಅನ್‌ಟು ದಿಸ್ ಲಾಸ್ಟ್' ಕೃತಿಯ ಸಿದ್ಧಾಂತಗಳನ್ನು ಹೇಗೆ ಅರ್ಥೈಸಿಕೊಂಡರು?

ಉತ್ತರ : ಗಾಂಧೀಜಿಯವರ ಬಾಳಿನಲ್ಲಿ ತಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿದುದು 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕ. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡ ಅವರು ಆ ಪುಸ್ತಕವನ್ನು 'ಸರ್ವೋದಯ'ವೆಂಬ ಹೆಸರಿನಿಂದ ಗುಜರಾತಿ (ಭಾಷೆ)ಗೆ ಅನುವಾದ ಮಾಡಿದರು. ಎಲ್ಲರ ಒಳ್ಳೆಯದರಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ. ವಕೀಲನ ಕೆಲಸಕ್ಕೆ ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ. ಶ್ರಮ ಜೀವಿಯ ಜೀವನ, ಉಳುವವನ ಅಥವಾ ಕೈಕಸುಬುಗಾರನ ಜೀವನವೇ ಯೋಗ್ಯ ಜೀವನ ಎಂಬ ಸಿದ್ಧಾಂತಗಳನ್ನು ಗಾಂಧೀಜಿಯವರು 'ಅನ್‌ಟು ದಿಸ್ ಲಾಸ್ಟ್' ಕೃತಿಯಿಂದ ಅರಿತರು.

26. ಜ್ಞಾನಿ–ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವನ್ನು ತಿಳಿಸಿ.

ಉತ್ತರ : ಜಗತ್ತಿನಲ್ಲಿ ಅರಿತವರು ಮತ್ತು ಅರಿಯದವರು ಇರುತ್ತಾರೆ. ಅರಿಯವದವರೊಡನೆ ಸಂಗ ಮಾಡಿದರೆ ಕಲ್ಲನ್ನು ಹೊಡೆದು ಬೆಂಕಿಯನ್ನು ಪಡೆದಂತೆ ಅಪ್ರಯೋಜನಕಾರಿಯಾಗಿರುತ್ತದೆ. ಅರಿತವರೊಡನೆ ಸಂಗ ಮಾಡಿದರೆ ಮೊಸರನ್ನು ಕಡೆದು ಬೆಣ್ಣೆಯನ್ನು ಪಡೆದಂತೆ ಪ್ರಯೋಜನಕಾರಿಯಾಗಿರುತ್ತದೆ. ಇವು ಅರಿಯದವರ ಮತ್ತು ಬಲ್ಲವರ ಸಂಗದ ಪರಿಣಾಮಗಳು ಶರಣರ ಸಂಗವನ್ನು ಮಾಡಿದರೆ ಕರ್ಪೂರದ ಗಿರಿಯನ್ನು ಉರಿಯಕೊಂಬಂತೆ ಎನ್ನುವುದು ಅಕ್ಕಮಹಾದೇವಿಯವರ ಅಭಿಪ್ರಾಯವಾಗಿದೆ.

27. ರಾಜರ ಪ್ರಕೃತಿ ಹೇಗಿರುತ್ತದೆ?

ಉತ್ತರ : ರಾಜರ ಪ್ರಕೃತಿಯೇ ಹೀಗಿರುತ್ತದೆ. ರಾಜರಾದವರಿಗೆ ಅಹಂಕಾರದ ದಾಹ ಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಇದು ಎಲ್ಲ ದುಡ್ಡಿನ ಮಹಿಮೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ರಾಜ್ಯ ಎನ್ನುವುದು ಒಂದು ವಿಷ. ಅದರ ಅಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ದಿ ಮಂಕಾಗಿ ಬಿಡುತ್ತದೆ.

V. ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು : 2 X 3 = 6

28. ದೇವನೂರ ಮಹಾದೇವ

ಉತ್ತರ : **ದೇವನೂರ ಮಹಾದೇವ :** ದೇವನೂರ ಮಹಾದೇವ ಅವರು ಕ್ರಿ. ಶ. ೧೯೪೮ ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರು ಎಂಬಲ್ಲಿ ಜನಿಸಿದರು. ಶ್ರೀಯುತರು 'ಎದೆಗೆ ಬಿದ್ದ ಅಕ್ಷರ, ದ್ಯಾವನೂರು, ಒಡಲಾಳ, ಕುಸುಮಬಾಲೆ, ನಂಬಿಕೆಯ ನೆಂಟ, ಗಾಂಧಿ ಮತ್ತು ಮಾವೋ, ನೋಡು ಮತ್ತು ಕೂಡು' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

29. ಕುವೆಂಪು

ಉತ್ತರ : **ಕುವೆಂಪು :** ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಸಾ. ಶ. ೧೯೦೪ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. ಶ್ರೀಯುತರು 'ಪಕ್ಷಿಕಾಶಿ, ಕೊಳಲು, ಪಾಂಚಜನ್ಯ, ಪ್ರೇಮ ಕಾಶ್ಮೀರ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಯಮನ ಸೋಲು, ಬೆರಳ್ಗೆ ಕೊರಳ್, ನೆನಪಿನ ದೋಣಿಯಲ್ಲಿ, ಶ್ರೀರಾಮಾಯಣ ದರ್ಶನಂ' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ ಮೊದಲಾದ ಪ್ರಶಸ್ತಿಗಳು ಲಭಿಸಿವೆ.

VI. ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು : **1 X 3 = 3**

30. ಆ ರವಮಂ ನಿರ್ಜಿತ ಕಂ
ಠೀರವರವಮಂ ನಿರಸ್ತಘನರವಮಂ ಕೋ

ಉತ್ತರ :

ಳ	ಳ	ಳ	
-UU	- -	U U-	
ಆರವ	ಮಂನಿ	ರ್ಜಿತಕಂ	= ೧೨

ಳ	ಳ	ಳ	ಳ	ಳ	
- UU	UU -	U-U	U UUU	- -	
ಠೀರವ	ರವಮಂ	ನಿರಸ್ತ	ಘನರವ	ಮಂಕೋ	= ೨೦

ಛಂದಸ್ಸು : ಇದು ಮಾತ್ರಾಗಣ ಆಧಾರಿತ 'ಕಂದಪದ್ಯ'ದ ಲಕ್ಷ್ಯವಾಗಿದೆ.

VII. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು : **1 X 3 = 3**

31. **"ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"**

ಉತ್ತರ : ಅಲಂಕಾರ : ಅರ್ಥಾಂತರನ್ಯಾಸಾಲಂಕಾರ.

ಲಕ್ಷಣ : ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಒಂದು ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದ ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರ.

ಸಮನ್ವಯ : ಉಪಮೇಯ (ವಿಶೇಷ ವಾಕ್ಯ) : ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.
ಉಪಮಾನ (ಸಾಮಾನ್ಯ ವಾಕ್ಯ) : ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

ಇಲ್ಲಿ ಉಪಮೇಯವಾದ 'ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು' ಎಂಬ ವಿಶೇಷ ವಾಕ್ಯವನ್ನು ಉಪಮಾನವಾದ 'ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?' ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಆದ್ದರಿಂದ ಇದು 'ಅರ್ಥಾಂತರನ್ಯಾಸಾಲಂಕಾರ'ದ ಲಕ್ಷ್ಯವಾಗಿದೆ.

VIII. ಗಾದೆಯನ್ನು ವಿಸ್ತರಿಸಿ ಬರೆಯುವುದು : **1 X 3 = 3**

32. ಮನಸ್ಸಿದ್ದರೆ ಮಾರ್ಗ.

ಅಥವಾ

ಅತಿ ಆಸೆ ಗತಿಗೇಡು.

ಉತ್ತರ : ಮನಸ್ಸಿದ್ದರೆ ಮಾರ್ಗ : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆ ವೇದಕ್ಕೆ ಸಮಾನ' ಎಂದು ಹೇಳುವರು. 'ಮನಸ್ಸಿದ್ದರೆ ಮಾರ್ಗ' ಎಂಬ ಈ ಮಾತಿನಲ್ಲಿ ಮಾನವನ ಅಂತರಾಳದಲ್ಲಿರುವ ಅಪಾರವಾದ ಶಕ್ತಿಯನ್ನು ಕೇಂದ್ರೀಕರಿಸಿ, ಗುರಿಯನ್ನು ಮುಟ್ಟುವ ಗುಟ್ಟು ಅಡಗಿದೆ.

ಮಾನವನ ಚೈತನ್ಯಕ್ಕೆ, ಬುದ್ಧಿಶಕ್ತಿಗೆ ಮಿತಿಯಿಲ್ಲ. ಸಕಾರಾತ್ಮಕ ಭಾವದಿಂದ ನಾವು ಕಾರ್ಯೋನ್ಮುಖರಾಗಬೇಕು. ನಾವು ಯಾವುದೇ ಒಂದು ಕೆಲಸವನ್ನು ಸರಿಯಾಗಿ ಮಾಡಲು ಆಸಕ್ತಿ ಇರಬೇಕು. ಆಸಕ್ತಿ ಮೂಡಲು ಆ ಕೆಲಸದ ಬಗ್ಗೆ ನಮಗೆ ಪ್ರೀತಿ ಇರಬೇಕು. ಆ ಕೆಲಸದಲ್ಲಿ ಪ್ರೀತಿ ಇದ್ದಾಗ ಸಹಜವಾಗಿಯೆ ಆ ಕೆಲಸ ಯಶಸ್ವಿಯಾಗುತ್ತದೆ. ವಿದ್ಯಾರ್ಥಿಯಾದವನು ಯಶಸ್ಸು ಪಡೆಯಬೇಕು ಎಂಬ ಮನಸ್ಸಿನಿಂದ ಕಾರ್ಯಪ್ರವೃತ್ತನಾದರೆ ಅವನ ಗುರಿ ತಲುಪುವ ಮಾರ್ಗ ಕಾಣುವುದು. ಸಿನೆಮಾವೊಂದರ ಹಾಡಿನ ಸಾಲಿನಲ್ಲಿ **"ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ"** ಎಂದು ಹೇಳಲಾಗಿದೆ. ಅಂದರೆ ನನ್ನ ಕೈಯಲ್ಲಿ ಆಗುವುದಿಲ್ಲ ಎಂದು ಯೋಚಿಸುವುದರಿಂದ ಯಾವ ಕೆಲಸವೂ ಸಾಧ್ಯವಾಗುವುದಿಲ್ಲ ಎಂದರ್ಥ. "Where there's a will, there's way" ಎಂಬ ಆಂಗ್ಲ ಗಾದೆಯಂತೆ ನಮ್ಮಲ್ಲಿ ಯಾವುದನ್ನೆ ಆಗಲಿ ಮಾಡಬೇಕು ಎನ್ನುವ ಉತ್ಕಟ ಆಕಾಂಕ್ಷೆ ಹುಟ್ಟಿಬಿಟ್ಟರೇ ಮಿಕ್ಕ ದಾರಿ ತಾನಾಗಿಯೇ ತೆರೆದುಕೊಳ್ಳುತ್ತದೆ. ಮಾಡಿಯೇ ತೀರುತ್ತೇನೆ ಎಂಬ ಮನಸ್ಸು ಎಂಥ ಕೆಲಸವನ್ನಾದರೂ ಸಾಧ್ಯಗೊಳಿಸುತ್ತದೆ ಎಂದು ಈ ಗಾದೆ ಸೂಚಿಸುತ್ತದೆ.

ಅಥವಾ

ಉತ್ತರ : ಅತಿ ಆಸೆ ಗತಿಗೇಡು : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆ ವೇದಕ್ಕೆ ಸಮಾನ' ಎಂದು ಹೇಳುವರು. ಮನುಷ್ಯನಿಗೆ ಆಸೆ ಇರಬೇಕು, ಆದರೆ ಆ ಆಸೆ ಮಿತಿಮೀರಿ ದುರಾಸೆಯಾದಾಗ ಜೀವನದ ಗತಿಯೇ ಕೆಡುತ್ತದೆ ಎಂಬ ಸತ್ಯವನ್ನು ಈ ಗಾದೆ ನಮಗೆ ಬೋಧಿಸುತ್ತದೆ. **"ದುರಾಸೆಯೇ ದುಃಖಕ್ಕೆ ಮೂಲ"** ಎಂಬ ಗೌತಮ ಬುದ್ಧನ ತತ್ವವೂ ಇದನ್ನೇ ಸಾರುತ್ತದೆ. **"ಇರುವುದರಲ್ಲಿ ತೃಪ್ತಿ ಪಡುವುದಕ್ಕಿಂತ ದೊಡ್ಡ ಸುಖವಿಲ್ಲ".**

ಮನುಷ್ಯನಿಗೆ ಆಸೆ ಇರುವುದು ಸ್ವಾಭಾವಿಕ. ಜೀವನದಲ್ಲಿ ಪ್ರಗತಿ ಹೊಂದಲು, ವಿದ್ಯಾವಂತನಾಗಲು, ಉದ್ಯೋಗ ಗಳಿಸಲು ಅಥವಾ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ ಪಡೆಯಲು ಆಸೆ ಅತ್ಯಗತ್ಯ. ಆಸೆಯೇ ಪ್ರಗತಿಯ ಮೂಲಶಕ್ತಿ. ಆದರೆ, ಆ ಆಸೆಯು ನಮ್ಮ ಯೋಗ್ಯತೆ, ಪರಿಶ್ರಮ ಮತ್ತು ಮಿತಿಯ ಒಳಗಿರಬೇಕು. ಯಾವಾಗ ಆಸೆಯು ತನ್ನ ಮಿತಿಯನ್ನು ಮೀರಿ, ಇತರರನ್ನು ತುಳಿದಾದರೂ ಸರಿ ತನಗೆ ಎಲ್ಲವೂ ಸಿಗಬೇಕು ಎಂದು ಹಂಬಲಿಸುತ್ತದೆಯೋ, ಆಗ ಅದು 'ದುರಾಸೆ' ಅಥವಾ 'ಅತಿಯಾಸೆ' ಎನಿಸಿಕೊಳ್ಳುತ್ತದೆ. ಅತಿಯಾಸೆಗೆ ಬಿದ್ದ ಮನುಷ್ಯನಿಗೆ ಒಳ್ಳೆಯದು ಮತ್ತು ಕೆಟ್ಟದ್ದನ್ನು ವಿವೇಚಿಸುವ ಬುದ್ಧಿ ಇರುವುದಿಲ್ಲ. ಆತನ ಕಣ್ಣನ್ನು ಲೋಭ ಆವರಿಸಿರುತ್ತದೆ. ಹಣ, ಅಧಿಕಾರ ಅಥವಾ ವಸ್ತುವಿನ ಮೇಲಿನ ಅತಿಯಾದ ವ್ಯಾಮೋಹದಿಂದಾಗಿ ಆತ ತಪ್ಪು ದಾರಿಯನ್ನು ಆರಿಸಿಕೊಳ್ಳುತ್ತಾನೆ. ಕೊನೆಗೆ ಕಾನೂನಿಗೆ ಸಿಕ್ಕಿ ಬಿದ್ದೋ ಅಥವಾ ಸಮಾಜದಲ್ಲಿ ಅಪಮಾನಕ್ಕೀಡಾಗಿಯೋ ತನ್ನಲ್ಲಿರುವ ನೆಮ್ಮದಿ, ಗೌರವ ಮತ್ತು ಸಂಪತ್ತನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾನೆ. ಇದಕ್ಕೆ ಚಿನ್ನದ ಮೊಟ್ಟೆಯಿಡುವ ಕೋಳಿಯ ಕಥೆ ಉತ್ತಮ ನಿದರ್ಶನವಾಗಿದೆ. ನಾವು ಅತಿಯಾಸೆಯನ್ನು ಬಿಟ್ಟು, ಸನ್ಮಾರ್ಗದಲ್ಲಿ ನಡೆದು, ನೆಮ್ಮದಿಯ ಜೀವನವನ್ನು ನಡೆಸಬೇಕು ಎಂಬುದೇ ಈ ಗಾದೆ ಮಾತಿನ ತಾತ್ಪರ್ಯವಾಗಿದೆ.

IX. ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು : 6 X 3 = 18

33. "ಒಂದು ಕ್ಷಣವಾದರೂ ಹುಲಿಗೆ ಅವರ ಮುಖದರ್ಶನವಾಗಲಿಲ್ಲ"

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಚಿಕ್ಕನಾಯಕನಹಳ್ಳಿಯಿಂದ ಮದಲಿಂಗನ ಕಣಿವೆಯ ಮಾರ್ಗವಾಗಿ ತಮ್ಮ ಹಳ್ಳಿಗೆ ಮರಳಿ ಬರುವಾಗ ಹಸಿದಿದ್ದ ಹುಲಿಯೊಂದು ಶಾನುಭೋಗರಿಗೆ ಎದುರಾಗುತ್ತದೆ. ಹುಲಿಯು ಮುಖಾಮುಖಿಯಾಗಿ ದಾಳಿ ಮಾಡಲು ಅವರ ತಲೆಯ ಮೇಲಿಂದ ಹಾರುತ್ತದೆ. ಅದು ನೆಲಕ್ಕೆ ಇಳಿಯುವಷ್ಟರಲ್ಲಿ, ಶಾನುಭೋಗರು ಅತ್ಯಂತ ಚಾಕಚಕ್ಯತೆಯಿಂದ ತಕ್ಷಣವೇ ತಿರುಗಿ ಬಂದ ದಾರಿಗೆ ಮುಖ ಮಾಡಿ ನಡೆಯಲಾರಂಭಿಸುತ್ತಾರೆ. ಹುಲಿ ಹಲವು ಬಾರಿ ಮುಂದೆ ಹಾರಿ ತಿರುಗಿದರೂ ಶಾನುಭೋಗರು ಅಷ್ಟೇ ವೇಗವಾಗಿ ಕುಲಾಲಚಕ್ರದಂತೆ ತಿರುಗುತ್ತಿರುತ್ತಾರೆ. ಈ ತಮಾಷೆಯ ಓಟದ ಬಗ್ಗೆ ವಿವರಿಸುವಾಗ ಲೇಖಕರು ಈ ಮೇಲಿನ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಸಾಯಿನದವಡೆಯಲ್ಲಿದ್ದರೂ ಹುಲಿಯ ಧರ್ಮದ ಬಗ್ಗೆ ತಿಳಿದಿದ್ದ ಶಾನುಭೋಗರು ತೋರಿದ ಅದ್ಭುತ ಸಮಯಪ್ರಜ್ಞೆ, ಚುರುಕುತನ ಮತ್ತು ಹುಲಿಯ ಮುಗ್ಧ 'ಧರ್ಮಶ್ರದ್ಧೆ' ಇಲ್ಲಿ ಅತ್ಯಂತ ಹಾಸ್ಯಭರಿತವಾಗಿ ಮತ್ತು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

34. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಿ. ಎಸ್. ಜಯಪ್ಪಗೌಡ ಅವರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೆಪ್ಟೆಂಬರ್ ೧೫, ೧೯೬೦ರಂದು ಸರ್ ಎಂ. ವಿಶ್ವೇಶ್ವರಯ್ಯನವರ ಶತಮಾನೋತ್ಸವವನ್ನು ಬೆಂಗಳೂರಿನಲ್ಲಿ ಆಚರಿಸಲಾಯಿತು. ಆ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಅಂದಿನ ಭಾರತದ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು ಅವರು ತಮ್ಮ ಭಾಷಣದಲ್ಲಿ ವಿಶ್ವೇಶ್ವರಯ್ಯನವರ ಕಾರ್ಯಸಾಧನೆ ಮತ್ತು ವ್ಯಕ್ತಿತ್ವವನ್ನು ಶ್ಲಾಘಿಸುತ್ತ ಈ ಮೇಲಿನ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : 'ಮಾತು ಬೆಳ್ಳಿ ಮೌನ ಬಂಗಾರ', 'ಮಾತಿಗಿಂತ ಕೃತಿ ಲೇಸು' ಎಂಬಂತೆ ವಿಶ್ವೇಶ್ವರಯ್ಯನವರು ಕೈಗೊಂಡ ಸಾಧನೆಗಳು ಅವರ ಬಗ್ಗೆ ಮಾತನಾಡುತ್ತಿದ್ದವು. ಸದಾ ಮೌನವಾಗಿದ್ದು ನಡೆದು ತೋರಿಸಿದ ವ್ಯಕ್ತಿತ್ವ ಭಾರತೀಯರಿಗೆ ಅನುಕರಣೀಯ ಎಂದು ನೆಹರು ಅವರು ಹೇಳಿದ್ದು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

35. "ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ?"

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶತ್ರು ದೇಶದ ವೈಮಾನಿಕ ದಾಳಿಯಿಂದ ತೀವ್ರವಾಗಿ ಗಾಯಮಾಡಿಕೊಂಡ ರಾಹಿಲ ಕಷ್ಟಪಟ್ಟು ಕತ್ತಲಿನಲ್ಲೇ ಈಜಿ ದಡ ಸೇರುತ್ತಾನೆ. ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲಿ ರಕ್ಷಣೆ ಪಡೆಯಲೆಂದು ಒಂಟಿ ಮನೆಯೆಡೆಗೆ ಬರುತ್ತಿದ್ದಾಗ ಆ ಮನೆಯಿಂದ ಮಹಿಳೆಯೊಬ್ಬಳ ಆರ್ತನಾದ ರಾಹಿಲನು ಕೇಳಿ ಅವನ ಮನದಲ್ಲಿ ಅನೇಕ ಪ್ರಶ್ನೆಗಳು ಮೂಡಿದ ಸಂದರ್ಭದಲ್ಲಿ ಬಂದ ಪ್ರಶ್ನೆ ಇದು.

ಸ್ವಾರಸ್ಯ : ರಕ್ಷಣೆ ಪಡೆಯುವ ಸಂದರ್ಭದಲ್ಲಿ ದೇಶ, ಭಾಷೆ, ಧರ್ಮವನ್ನು ಲೆಕ್ಕಿಸದೆ ಹೇಗಾದರೂ ಮಾಡಿ ಜೀವ ಉಳಿಸಿಕೊಳ್ಳಬೇಕೆಂಬ ಹೋಗುತ್ತಿದ್ದಾಗ ಒಂಟಿಮನೆಯ ಮಹಿಳೆಯ ಆರ್ತನಾದ ರಾಹಿಲನಲ್ಲಿ ಭಯವನ್ನುಂಟು ಮಾಡಿದ್ದು ಇಲ್ಲಿನ ಸ್ವಾರಸ್ಯವಾಗಿದೆ.

36. "ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ"

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಎಂಬ ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಕವಿ ಬೇಂದ್ರೆ ಅವರು ಕಾಲವನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಬಹಳ ಮನೋಜ್ಞವಾಗಿ ಹಕ್ಕಿ ಹಾರುತಿದೆ ನೋಡಿದಿರಾ ಪದ್ಯವನ್ನು ರಚಿಸಿದ್ದಾರೆ. ನಿರಂತರವಾಗಿ ಚಲಿಸುತ್ತಿರುವ ಕಾಲವೆಂಬ ಹಕ್ಕಿಯು ಚಂದ್ರಲೋಕದ ಅಂಗಳಕ್ಕೆ ಹಾರಿ ಮಂಗಳನ ಅಂಗಳಕ್ಕೆ ಕಾಲಿಟ್ಟು ತಾನು ಹಾಡಲು ಹಾರಾಡಲು ಹೊರಟಿದೆ. ಅದು ಶುಕ್ರಗ್ರಹವೆಂಬ ಬೆಳ್ಳಿಯ ಹಳ್ಳಿಯ ಮೇರೆಯನ್ನು ಮೀರಿ ಹಾರುತ್ತಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತನ್ನು ಕವಿ ಹೇಳಿದ್ದಾರೆ.

ಸ್ವಾರಸ್ಯ : ಮಾನವನ ವೈಜ್ಞಾನಿಕ ಕ್ರಾಂತಿ ಬೆಳೆವಣಿಗೆಗಳು ಹಾಗೂ ಶುಕ್ರ, ಚಂದ್ರ, ಮಂಗಳ ಗ್ರಹಗಳಿಗೆ ಮಾನವ ಸಂಚರಿಸಬಹುದಾದ ದಾರ್ಶನಿಕ ಮುನ್ನೋಟ, ಮಾನವ ಪ್ರಪಂಚದಲ್ಲಾಗುವ ವೈಜ್ಞಾನಿಕ ವೈಚಿತ್ರ್ಯ ವಿಸ್ಮಯ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

37. "ನೆಲಕಿಜೆವೆನೆಂದು ಬಗೆದಿರೆ ಚಲಕಿಜೆವೆಂ"

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ರನ್ನನು ಬರೆದ 'ಸಾಹಸ ಭೀಮ ವಿಜಯಂ' ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಮಹಾಭಾರತ ಯುದ್ಧದಲ್ಲಿ ತನ್ನೆಲ್ಲಾ ಸಹೋದರರನ್ನು ಮತ್ತು ಆಪ್ತಮಿತ್ರ ಕರ್ಣನನ್ನು ಕಳೆದುಕೊಂಡ ದುರ್ಯೋಧನನು ತಂದೆತಾಯಿಯರ ಸಲಹೆ ಮೇರೆಗೆ ಶರಶಯ್ಯೆದಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬಂದಾಗ, ಭೀಷ್ಮರು ನೀನು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆ ನೀಡಿದಾಗ ದುರ್ಯೋಧನನು ನಿಮಗೆ ನಮಸ್ಕರಿಸಿ ಆಶೀರ್ವಾದ ಪಡೆಯಲು ಬಂದೆನಷ್ಟೇ ಹೊರತು, ನನ್ನ ಶತ್ರುಗಳೊಂದಿಗೆ ಒಪ್ಪಂದ ಮಾಡಿಸಿ ಎಂದು ಕೇಳಲು ಬಂದಿಲ್ಲ ಎಂದು ಹೇಳುವ ಸಂದರ್ಭದಲ್ಲಿ ದುರ್ಯೋಧನ ಈ ಮೇಲಿನ ಮಾತನ್ನು ಭೀಷ್ಮರಿಗೆ ಹೇಳುತ್ತಾನೆ.

ಸ್ವಾರಸ್ಯ : 'ನೆಲ ಕಿರಿದಾಗಿರಬಹುದು ಛಲ ಹಿರಿದಾಗಿದೆ' ಎಂಬ ಸೂಚ್ಯಾರ್ಥ, ಛಲದಿಂದ ಬದುಕುವುದು ಕ್ಷತ್ರೀಯನ ಹುಟ್ಟುಗುಣ, ಅದು ಅವನಿಗೆ ಭೂಷಣ ಅದರಲ್ಲೂ ದುರ್ಯೋಧನನ ಛಲದ ಗುಣ ಅವನ ವ್ಯಕ್ತಿತ್ವಕ್ಕೆ ತಕ್ಕುದಾಗಿದೆ ಎಂಬ ಮಾತು ಸ್ವಾರಸ್ಯಕರವಾಗಿ ಮೂಡಿಬಂದಿದೆ.

38. "ಅರಿಯಿರೆ ನೀಮುಮಾಮುಮೊಡನೋದಿದೆವೆಂಬುದನಣ್ಣ"

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ದ್ರುಪದನು ಅಧಿಕಾರದ ಮದದಿಂದ ಪಡಿಯರನಿಗೆ ದ್ರೋಣನೆಂಬುವನನ್ನು ನಾನು ತಿಳಿದಿಲ್ಲ. ಅವನನ್ನು ಹೊರಕ್ಕೆ ತಳ್ಳು ಎಂದು ಸಭಾಮಧ್ಯದಲ್ಲಿ ಅಹಂಕಾರದಿಂದ ಮಾತನಾಡಿದನು. ಪಡಿಯರನಿಂದ ದ್ರುಪದನು ಆಡಿದ ಮಾತುಗಳನ್ನು ಕೇಳಿ ದ್ರೋಣನು ಬಲತ್ಕಾರದಿಂದ ಅರಮನೆಯ ಸಭಾಂಗಣದ ಒಳಬಂದು ದ್ರುಪದನಿಗೆ ಈ ಮೇಲಿನಂತೆ ಪ್ರಶ್ನಿಸಿದ ಮಾತಿದು.

ಸ್ವಾರಸ್ಯ : ತನ್ನ ಮುಖವನ್ನು ನೋಡಿದರೇ ಬಾಲ್ಯದ ದಿನಗಳು ನೆನಪಾಗಬಹುದು ಎಂಬ ಭಾವ, ದ್ರುಪದನ ಅಹಂಕಾರ, ದ್ರೋಣನ ವಿನಯತೆ ಸ್ವಾರಸ್ಯಪೂರ್ಣವಾಗಿ ಇಲ್ಲಿ ಮೂಡಿಬಂದಿದೆ.

X. ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) : 1 X 4 = 4

39. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

.....

.....

.....

.....

ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

ಅಥವಾ

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ

.....

.....

.....

.....

ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು

ಉತ್ತರ : ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

ಅಥವಾ

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

XI. ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು : 1 X 4 = 4

40. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ

ಉತ್ತರ : ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ ಅರ್ಧ ಯಶಸ್ಸನ್ನು ಪಡೆದಂತೆ. ದೃಢಸಂಕಲ್ಪದಿಂದ ಧನಾತ್ಮಕ ಭಾವನೆ, ಸಂಕಲ್ಪದತ್ತ ದೃಢನಿರ್ಧಾರದಿಂದ ಕಾರ್ಯಶೀಲರಾದರೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ಕವಿ ಜಿ. ಎಸ್. ಶಿವರುದ್ರಪ್ಪನವರು 'ಸಂಕಲ್ಪಗೀತೆ' ಎಂಬ ಪದ್ಯಪಾಠದಲ್ಲಿ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

ಜನರಲ್ಲಿ ಇಂದು ನಾನಾ ಕಾರಣಗಳಿಂದ ನಂಬಿಕೆ ವಿಶ್ವಾಸ, ಹೊಂದಿಕೊಂಡು ಬಾಳುವ ಗುಣ ಮುಂತಾದ ಸುಖಭಾವದ ಸ್ಥಂಭಗಳೇ ಬಿದ್ದುಹೋಗಿವೆ. ಹೀಗಾಗಿ ಚೆನ್ನಾಗಿ ಬದುಕುತ್ತೇವೆ ಎಂಬ ಭರವಸೆಯೇ ಹೊರಟು ಹೋಗುತ್ತಿದೆ. ಆದ್ದರಿಂದ ನಂಬಿಕೆ, ವಿಶ್ವಾಸ, ಪ್ರೀತಿ ಸ್ನೇಹಗಳೆಂಬ ಆಧಾರಸ್ಥಂಭಗಳನ್ನು ಮತ್ತೆ ಮೇಲೆಬ್ಬಿಸಿ ಮನದಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡುವ ಹೊಸ ಭರವಸೆಗಳನ್ನು ಕಟ್ಟಬೇಕು. ಭಾಷೆ, ಜಾತಿ, ಮತ, ಧರ್ಮಗಳಲ್ಲಿನ ಭೇದಭಾವಗಳಿಂದ ಜನರಲ್ಲಿ ಅಸಮಾನತೆ, ಅಪನಂಬಿಕೆ, ಅಸ್ಪೃಶ್ಯತೆ ಮೊದಲಾದ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವನ್ನು ಸಮಾನತೆ, ಸ್ನೇಹ, ಪ್ರೀತಿ, ಒಳ್ಳೆಯ ಚಿಂತನೆಗಳ ಮೂಲಕ ಮನುಜರ ನಡುವಿನ ಅಡ್ಡಗೋಡೆಗಳನ್ನು ಕೆಡವಿ ಪರಸ್ಪರರಲ್ಲಿ ನಂಬಿಕೆ ಮೂಡಿಸುವ ಸಹಬಾಳ್ವೆಗೆ ಸೇತುವೆಯಾಗುವ ಸಂಕಲ್ಪ ತೊಡಬೇಕೆಂದು ಕವಿ ಜಿ. ಎಸ್. ಶಿವರುದ್ರಪ್ಪ ಅವರು ಆಶಿಸಿದ್ದಾರೆ.

ಜೀವನದಲ್ಲಿ ಧನಾತ್ಮಕ ಭಾವನೆ ಹೊಂದಿರಬೇಕು. ಯಾವುದೇ ಸವಾಲುಗಳು ಎದುರಾದರೂ ಆತ್ಮ ವಿಶ್ವಾಸದಿಂದ ಎದುರಿಸಬೇಕು. ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಸ್ವಾಸ್ಥ್ಯಯುತ ಸಮಾಜ ನಿರ್ಮಾಣ ಮಾಡಬಹುದು. ಎಲ್ಲರೂ ಪ್ರೀತಿ ವಿಶ್ವಾಗಳಿಂದ ಬದುಕಬೇಕು ಎಂಬ ಮೌಲ್ಯಯುತ ಸಂದೇಶ ಪ್ರಸ್ತುತ ಪದ್ಯಭಾಗದಲ್ಲಿ ಅಡಕವಾಗಿದೆ.

XII. ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : 2 X 4 = 8

41. 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು. ಈ ಹೇಳಿಕೆಯನ್ನು ಸಮರ್ಥಿಸಿ.

ಅಥವಾ

ಮತಂಗಾಶ್ರಮಕ್ಕೆ ಬಂದ ಶ್ರೀರಾಮ ಶಬರಿಯರ ನಡುವಿನ ಸಂಭಾಷಣೆಯನ್ನು ಸಂಗ್ರಹಿಸಿ ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉತ್ತರ : ಶಬರಿ ಮತಂಗ ಋಷಿಯ ಆಶ್ರಮದಲ್ಲಿ ಇದ್ದ ತಪಸ್ವಿನಿ. ಮತಂಗ ಋಷಿಯ ಪ್ರಿಯ ಶಿಷ್ಯೆ. ಸಿದ್ಧರಾದ ಮತಂಗ ಋಷಿಗಳು ತಮ್ಮ ಅಂತ್ಯಕಾಲದಲ್ಲಿ ಶಬರಿಯ ಮೇಲೆ ಕರುಣೆಯನ್ನು ತೋರಿ ಶ್ರೀರಾಮಲಕ್ಷ್ಮಣರು ಈ ಆಶ್ರಮಕ್ಕೆ ಬಂದೇ ಬರುತ್ತಾರೆ. ನಿನಗೆ ಶ್ರೀರಾಮಲಕ್ಷ್ಮಣರ ದರ್ಶನದಿಂದ ಒಳ್ಳೆಯದಾಗುತ್ತದೆ. ನಿನ್ನಿಷ್ಟಾರ್ಥ ನೆರವೇರುತ್ತದೆ ಎಂದು ಹೇಳಿದ್ದರು. ಗುರುಗಳ ಈ ಮಾತನ್ನು ನಂಬಿದ ಶಬರಿಯು ಶ್ರೀರಾಮನ ಆಗಮನಕ್ಕಾಗಿ ಪ್ರತಿನಿತ್ಯ ಕಾಯುತ್ತಿದ್ದಳು. ಶಬರಿಯು ಗುರುಗಳ ಮಾತಿನ ಮೇಲೆ ಇಟ್ಟ ನಂಬಿಕೆ ಹಾಗೂ ಶ್ರೀರಾಮನಿಗಾಗಿ ಹಂಬಲಿಸುತ್ತ ಕಾಯುತ್ತಿದ್ದ ಅವಳ ತಾಳ್ಮೆಯು ಹುಸಿಯಾಗಲಿಲ್ಲ. ಮತಂಗ ಋಷಿಗಳು ಶಬರಿಗೆ ಹೇಳಿದ ಮಾತಿನಂತೆ ರಾಮಲಕ್ಷಣರು ಶಬರಿಯ ಆಶ್ರಮಕ್ಕೆ ಭೇಟಿ ನೀಡುತ್ತಾರೆ. ಶಬರಿಯು ಶ್ರೀರಾಮನ ದರ್ಶನದಿಂದ ಪುಳಕಿತಳಾಗುತ್ತಾಳೆ. ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಳ್ಳುತ್ತಾಳೆ. ಅಯ್ಯೋ, ಏನೂ ಸಿದ್ಧತೆಯಿಲ್ಲ; ನಿನ್ನೆಯಷ್ಟು ಚೆನ್ನವಿಲ್ಲ ಎಂದು ಹಂಬಲಿಸಿ, ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ, ಅಬ್ಬಾ ಎಂದು ಹಿಗ್ಗಿ ಹಿಗ್ಗಿ ಸಂತಸ ಪಡುತ್ತಾಳೆ. ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದು ತಂದೆನೆಂದು ಎಂದು ಹೇಳುತ್ತ ತಾನೇ ಅವರ ಕೈಯಲ್ಲಿ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸುತ್ತಾಳೆ. ಶಬರಿಯು ಶ್ರೀರಾಮನಲ್ಲಿ ತನಗೆ ಮುಕ್ತಿಯನ್ನು ನೀಡುವಂತೆ ಬೇಡಿಕೊಂಡು ವೇದಿಯಲ್ಲಿದ್ದ ಅಗ್ನಿಯನ್ನು ಪ್ರವೇಶಿಸಿ ಮುಕ್ತಿಯನ್ನು ಪಡೆಯುತ್ತಾಳೆ. ಮುನಿಗಳ ಮಾತನ್ನು ನಂಬಿ, ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಸಹನೆಯಿಂದ ಕಾಯುತ್ತ, ಶ್ರೀರಾಮನು ತನ್ನ ಬಳಿಗೆ ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಗುತ್ತದೆ. ಶಬರಿಯ ಮನದಾಸೆ ಈಡೇರುತ್ತದೆ. ಹೀಗೆ 'ನಂಬಿಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ನಿಜವಾಗಿದೆ.

ಅಥವಾ

ಉತ್ತರ : ಮತಂಗ ಋಷಿಗಳು ತಮ್ಮ ಅಂತ್ಯಕಾಲದಲ್ಲಿ ಶಬರಿಯ ಮೇಲೆ ಕರುಣೆಯನ್ನು ತೋರಿ ರಾಮಲಕ್ಷ್ಮಣರು ಈ ಆಶ್ರಮಕ್ಕೆ ಬರುತ್ತಾರೆ. ನಿನಗೆ ರಾಮಲಕ್ಷ್ಮಣರ ದರ್ಶನದಿಂದ ಒಳ್ಳೆಯದಾಗುತ್ತದೆ. ನಿನ್ನಿಷ್ಟಾರ್ಥ ನೆರವೇರುತ್ತದೆ ಎಂದು ಹೇಳಿದ್ದರು. ಗುರುಗಳ ಈ ಮಾತನ್ನು ನಂಬಿದ ಶಬರಿಯು ಶ್ರೀರಾಮನ ಆಗಮನಕ್ಕಾಗಿ ಪ್ರತಿನಿತ್ಯ ಪರ್ಣಶಾಲೆಯ ಮುಂದೆ ಹಂಬಲಿಸುತ್ತಿದ್ದಳು. ಸೀತಾಪರಣದ ನಂತರ ಶ್ರೀರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಕಾಡಿನಲ್ಲಿ ಅಲೆದಾಡುತ್ತಿದ್ದರು. ದನುವಿನ ಸೂಚನೆಯಂತೆ ಮತಂಗಾಶ್ರಮದ ಕಡೆಗೆ ಬರುತ್ತಾರೆ. ತನಗಾಗಿ ಹಂಬಲಿಸಿ ದಿಗಳನ್ನು ಕಳೆಯುತ್ತಿರುವ ಶಬರಿಯನ್ನು ಅಲ್ಲಿ ಗಮನಿಸುತ್ತಾರೆ. ಶ್ರೀರಾಮನ ಗುಣಗಾನ ಮಾಡುತ್ತ ತಾನು ಕಾಡಿನಿಂದ ತಂದ ಹೂವು, ಹಣ್ಣು, ತಳಿರುಗಳನ್ನು ವಿಂಗಡಿಸುತ್ತಿದ್ದಾಗ ರಾಮನು ಶಬರಿಗೆ ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೆ? ಎಂದು ಪ್ರಶ್ನಿಸಿ ತನ್ನನ್ನು ಪರಿಚಯಿಸಿಕೊಳ್ಳುವನು. ತನ್ನ ಮುಂದಿರುವವನು ರಾಮನೆಂದು ತಿಳಿದಾಗ ಶಬರಿಯು ಆಶ್ಚರ್ಯ ಚಕಿತಳಾಗುತ್ತಾಳೆ. ಶಬರಿಯು ರಾಮಲಕ್ಷ್ಮಣರ ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಳ್ಳುತ್ತಾಳೆ. ಇಂದು ಏನೂ ಸಿದ್ಧತೆಯಿಲ್ಲ; ನಿನ್ನೆಯಷ್ಟು ಚೆನ್ನವಿಲ್ಲ ಎಂದು ಹಂಬಲಿಸಿ, ತನ್ನ ಮನದ ಬಯಕೆಯಂತೆ ಬಗೆ ಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸ ಪಡುತ್ತಾಳೆ. ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದು ತಂದೆನೆಂದು ಎಂದು ಹೇಳುತ್ತ ತಾನೇ ಅವರ ಕೈಯಲ್ಲಿ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸುತ್ತಾಳೆ. ನನ್ನ ಮೇಲೆ ಮರುಕ ತೋರಿ, ಜಾಡನ್ನು ಹಿಡಿದು ಬಂದ ನಿಮಗೆ ಹಸಿವು ಬಾಯಾರಿಕೆ ಈಗ ತಣಿಯಿತೆ? ಎಂದು ಹೇಳಿ ದುಃಖಿಸುತ್ತಾಳೆ, ಆತಿಥ್ಯವನ್ನು ಸ್ವೀಕರಿಸಿದ ಶ್ರೀರಾಮಲಕ್ಷ್ಮಣರು ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ, ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ, ನಿನ್ನ ಮನೆಯೇ ನಮ್ಮ ಮನೆ, ನೀನೇ ತಾಯಿಯಂತೆ ಎನ್ನುತ್ತಾರೆ. ರಾಮನೇ ನಿನ್ನ ರೂಪದಂತೆ ನಿನ್ನಯ ಮಾತುಗಳು ಉದಾರವಾಗಿವೆ. ಸಿದ್ಧರ ವರವು ಇಂದು ಫಲಿಸಿತು. ನನಗೆ ನೀನು ಮುಕ್ತಿಯನ್ನು ಕರುಣಿಸು ಎಂದು ಶಬರಿ ಬೇಡುತ್ತಾಳೆ. ಇಷ್ಟೊಂದು ಪ್ರೀತಿಯನ್ನು ತೋರಿ ಈಗ ಮುಕ್ತಿಯನ್ನು ಬೇಡುವ ಶಬರಿಗೆ ಸಾವನ್ನು ಕರುಣಿಸಲು ಮನಸ್ಸಿಲ್ಲದೇ ಇದ್ದರೂ ಆಕೆಯ ಇಚ್ಛೆಯಂತೆ ಮುಕ್ತಿಹೊಂದಲು ಆಶೀರ್ವದಿಸಿದಾಗ ಆಕೆ ಬಲವಂದು ಪ್ರದಕ್ಷಿಣೆ ಹಾಕಿ ಅಗ್ನಿ ಪ್ರವೇಶಿಸುತ್ತಾಳೆ. ಹೀಗೆ ರಾಮ ಶಬರಿಯರ ನಡುವೆ ಸ್ವಾರಸ್ಯಯುತ ಸಂಭಾಷಣೆ ನಡೆಯುವುದು.

42. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳನ್ನು ಕುರಿತು ಬರೆಯಿರಿ.

ಅಥವಾ

ಪಾಂಡವರ ರಕ್ಷಣೆಗೆ ನಿಂತ ಶ್ರೀಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ವಿವರಿಸಿ.

ಉತ್ತರ : ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವ ನಿರಾಕರಿಸುತ್ತಾನೆ. ಸಂಧಾನದ ಮೂಲಕ ರಾಜ್ಯವನ್ನು ಮರಳಿ ಪಡೆಯುವ ಯತ್ನವನ್ನು ಧರ್ಮರಾಯನು ಕೃಷ್ಣನ ಮೂಲಕ ಪ್ರಯತ್ನಿಸುತ್ತಾನೆ. ಆದರೆ ಅದು ದುರ್ಯೋಧನನ ಹಠದಿಂದ ತಿರಸ್ಕೃತವಾದಾಗ ಯುದ್ಧ ಅನಿವಾರ್ಯವಾಗುತ್ತದೆ. ಆಗ ಧರ್ಮ ಪ್ರತಿಷ್ಠಾಪನೆಗಾಗಿ ಕೃಷ್ಣನು ಶತ್ರುಗಳ ಬಲವನ್ನು ಕುಗ್ಗಿಸುವ ಭೇದ ತಂತ್ರವನ್ನು ಪ್ರಯೋಗಿಸಲಾರಂಭಿಸುತ್ತಾನೆ. ಕರ್ಣನನ್ನು ತನ್ನ ರಥದಲ್ಲಿ ಕೂರಿಸಿಕೊಂಡು ಅವನ ಜನ್ಮವೃತ್ತಾಂತವನ್ನು ಹೇಳುತ್ತಾನೆ. ಅಷ್ಟೇ ಅಲ್ಲದೆ "ಪಾಂಡವರಲ್ಲಿ ನೀನೇ ಹಿರಿಯನಾದುದರಿಂದ ಸಾಮ್ರಾಜ್ಯಕ್ಕೆ ನೀನೇ ಅಧಿಪತಿಯಾಗುವೆ." ಎಂಬ

ಆಮಿಷವನ್ನು ಒಡ್ಡುತ್ತಾನೆ. ಕೃಷ್ಣನ ಮಾತುಗಳನ್ನು ಸಮಾಧಾನದಿಂದ ಕೇಳಿದ ಕರ್ಣನು ತನ್ನ ಜನ್ಮವತ್ತಾಂತವನ್ನು ತಿಳಿದು "ಕುರುಪತಿಯಾದ ದುರ್ಯೋಧನನಿಗೆ ಕೇಡಾಯಿತು" ಎಂದು ತನ್ನ ಮನದೊಳಗೆ ನೊಂದುಕೊಳ್ಳುತ್ತಾನೆ. ಕೃಷ್ಣನ ಆಮಿಷ, ಕರ್ಣನಿಗೆ ಕೃಷ್ಣ ತಿಳಿಸುವ ಜನ್ಮರಹಸ್ಯದಿಂದ ಕರ್ಣನ ಕೊರಳಿನ ರಕ್ತನಾಳಗಳು ಹಿಗ್ಗಿದವು, ಕಂಬನಿಯು ರಭಸದಿಂದ ಮುನ್ನುಗ್ಗಿ ಬಂದು ಅಧಿಕವಾಗಿ ಕರ್ಣನು ನೊಂದನು. ಕರ್ಣನು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡುಂಟಾಯಿತಲ್ಲಾ" ಎಂದು ಸಂಕಟಪಟ್ಟನು. ಹರಿಯ ಹಗೆತನ ಹೊಗೆ ಕಾಣಿಸಿಕೊಳ್ಳದೆ, ಸುಡದೆ ಬಿಡುತ್ತದೆಯೇ? ನನ್ನ ವಂಶವನು ತಿಳಿಸಿ ಕೊಂದನು. ಹೆಚ್ಚಿಗೆ ಹೇಳುವುದು ಇನ್ನೇನಿದೆ ಎಂದು ಚಿಂತಿಸಿದನು. ಮೌನಿಯಾದ ಕರ್ಣನಿಗೆ ಕೃಷ್ಣನು "ಯಾಕೆ ಸುಮ್ಮನಿರುವೆ ಕರ್ಣ. ನಿನ್ನ ಮನಸ್ಸಿನಲ್ಲಾದ ತಲ್ಲಣಗಳೇನು? ಚಿಂತಿಸಬೇಡ. ನಿನ್ನ ಅಪದೆಸೆಯನ್ನು ನಾನು ಬಯಸುವುದಿಲ್ಲ. ಆದರೆ ಮರಳುತನ ಮಾಡಬೇಡ" ಎಂದು ಹೇಳಿದಾಗ ಸಿಟ್ಟಿಗೆದ್ದ ಕರ್ಣ "ಮರುಳು ಮಾಧವ" ಎಂದು ಕರೆಯುತ್ತಾನೆ. ಮುಂದುವರೆದು "ಈ ಮಹಿಯ ರಾಜ್ಯದ ಸಿರಿ–ಸಂಪತ್ತಿಗೆ ನಾನು ಸೋಲುವುದಿಲ್ಲ. ನನಗೆ ಕೌರವರು ಮತ್ತು ಪಾಂಡವರು ಸೇವಕರಾಗುವುದು ಇಷ್ಟವಿಲ್ಲ. ನನ್ನನ್ನು ಸಾಕಿ ಸಲುಹಿದ ದೊರೆ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ಅರ್ಪಿಸಬೇಕೆಂಬ ಭರದಲ್ಲಿದ್ದೆ, ಆದರೆ ನೀನು ನನ್ನ ಜನ್ಮರಹಸ್ಯವನ್ನು ಹೇಳಿ ನನ್ನ ದೊರೆ ದುರ್ಯೋಧನನನ್ನು ಕೊಂದೆ. ವೀರ ಕೌರವನೇ ನನ್ನ ನಾಯಕ. ಆತನ ಶತ್ರುಗಳೇ ನನ್ನ ಶತ್ರುಗಳು, ಆತನ ಮಿತ್ರರೇ ನನ್ನ ಮಿತ್ರರು. ನಾಳೆ ನಡೆಯುವ ಸಮರದಲ್ಲಿ ನನ್ನ ಭುಜಬಲದ ಪರಾಕ್ರಮವನ್ನು ತೋರುತ್ತೇನೆ. ಈ ಯುದ್ಧ ಮಾರಿದೇವಿಗೆ ಔತಣಕೂಟವಾಗಲಿದೆ. ಕೌರವನ ಋಣ ಹಿಂಗುವವರೆಗೆ ಚತುರಂಗದ ಬಲದೊಂದಿಗೆ ಹೋರಾಡಿ ಅಗತ್ಯ ಸಮಯದಲ್ಲಿ ದೇಹ ತ್ಯಾಗ ಮಾಡುತ್ತೇನೆ. ಆದರೆ ನಿನ್ನವರಾದ ಪಾಂಡವರನ್ನು ನೋಯಿಸುವುದಿಲ್ಲ. ಸೂರ್ಯದೇವನ ಮೇಲೆ ಆಣೆ ಎಂದು ವಾಗ್ದಾನ ಮಾಡುತ್ತಾನೆ. ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣ ಕೃಷ್ಣನ ಪ್ರಲೋಭನೆಗೆ ಒಳಗಾಗದೆ, ಅಸಹಾಯಕ ಸ್ಥಿತಿಯಲ್ಲಿ ನೋವು ಸಂಕಟಗಳಿಂದ ಬಳಲುವ ಕರ್ಣನ ವ್ಯಕ್ತಿತ್ವ ಅನಾವರಣಗೊಂಡಿದೆ. ಹೀಗೆ ಕರ್ಣನು ತನ್ನ ಮನಸ್ಸಿನಲ್ಲಾದ ನೋವನ್ನು ಕೃಷ್ಣನ ಬಳಿ ಹೇಳಿಕೊಳ್ಳುತ್ತಾನೆ.

ಅಥವಾ

ಉತ್ತರ : ಕಪಟನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನು ಸಂಧಿಯ ನೆಪದಲ್ಲಿ ದುರ್ಯೋಧನನ ಬಲವನ್ನು ಕುಗ್ಗಿಸುವ ಸಲುವಾಗಿ ಮೊದಲು ವಿದುರನಲ್ಲಿಗೆ ಹೋಗಿ ಆತನು ಯುದ್ದದಿಂದ ವಿಮುಖವಾಗುವಂತೆ ಮಾಡುತ್ತಾನೆ. ನಂತರ ಕರ್ಣನ ಹತ್ತಿರ ಬಂದ ಶ್ರೀಕೃಷ್ಣನು ಕರ್ಣನಿಗೆ ಹಲವು ಆಸೆ–ಆಮಿಷಗಳನ್ನು ಒಡ್ಡುತ್ತಾನೆ. "ಕರ್ಣ ನಿಮಗೂ ಯಾದವ, ಕೌರವರಿಗೂ ಭೇದವಿಲ್ಲ. ನಿನ್ನಾಣೆ ನೀನು ನಿಜವಾಗಿ ಮೇದಿನಿಪತಿ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ." ಎಂದು ಹೇಳುತ್ತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು. "ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗೆ ನೀನು, ನಿನ್ನಯ ನಂತರ ಧರ್ಮರಾಯ, ಮೂರನೆಯಾತ ಕಲಿಭೀಮ, ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದರು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ ಸಹದೇವರು ಇಬ್ಬರು ಹುಟ್ಟಿದರು. ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು. ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು. ಎರಡು ವಂಶವು ಮರು ಮಾತನಾಡದೆ ನಿನ್ನ ಸೇವೆಯನ್ನು ಮಾಡುವುವು. ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ ಹೇಳು? ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡವರು, ಎದುರಿಗೆ ಮಾದ್ರ ಮಾಗದ ಯಾದವಾದಿಗಳ ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆದು, ದುರ್ಯೋಧನನು ಕರೆದಾಗ 'ಒಡೆಯ ಅನುಗ್ರಹವಾಗಲಿ' ಎನ್ನಲು ನಿನಗೆ ಕಷ್ಟವಾಗುವುದಿಲ್ಲವೇ? ಮರುಳುತನ ಮಾಡಬೇಡ. ನಾನು ನಿನ್ನ ಅಪದೆಸೆಯನ್ನು ಬಯಸುವವನಲ್ಲ. ಹಸ್ತಿನಾಪುರದ ರಾಜನಾಗಿ ವೈಭವದಿಂದ ಮೆರೆಯುವ ಅವಕಾಶವನ್ನು ಬೇಡ ಎನ್ನಬೇಡ "ಎಂದು ಆಮಿಷ ಒಡ್ಡಿದನು.

XIII. ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

1 X 4 = 4 (2+2)

43. ಹಾವೇರಿಯು ಧಾರವಾಡದ ದಕ್ಷಿಣದಲ್ಲಿರುವ ಒಂದು ಊರು. ಅದರ ಹತ್ತಿರದ ಸಂಗೂರಿನಲ್ಲಿ ಒಂದು ಶಿಲಾಶಾಸನವಿದೆ. ಇದರಲ್ಲಿ ಸುಂದರವಾದ ಪುರುಷ ವಿಗ್ರಹವನ್ನು ನೋಡಬಹುದು. ಅದು ಗಂಡುಗಲಿ ಕುಮಾರರಾಮನದು. ತುಮಕೂರು ಜಿಲ್ಲೆಯ ದೊಡ್ಡಪಾಲನಹಳ್ಳಿಯಲ್ಲಿ ಕುಮಾರರಾಮನ ಗುಡಿಯಿದೆ. ಇಲ್ಲಿ ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಹಿರಿಯರು ಕುಮಾರರಾಮನ ಕಥೆ ಹೇಳುತ್ತಾರೆ. ಜನರು ಶ್ರದ್ಧೆಭಕ್ತಿಯಿಂದ ಆಲಿಸುತ್ತಾರೆ. ಕುಮಾರರಾಮನು ಪರಮ ಪ್ರತಾಪಿಯಾಗಿದ್ದ ಮುಮ್ಮಡಿ ಸಿಂಗನಾಯಕನ ಮೊಮ್ಮಗ. ೧೩ನೆಯ ಶತಮಾನದ ಕಡೆಯಲ್ಲಿ ಸಿಂಗನಾಯಕನೆಂದರೆ ಸೋಲರಿಯದ ಸರದಾರನೆಂದೇ ಹೆಸರಾಗಿದ್ದ. ಇವನ ವಿರುದ್ಧ ಕತ್ತಿ ಎತ್ತಿದವರೆಲ್ಲ ಹತರಾಗಿದ್ದರು. ಹರಿಹರದಿಂದ ನೆಲ್ಲೂರಿನವರೆಗೆ, ಚಿತ್ರದುರ್ಗದಿಂದ ಕರ್ನೂಲಿನವರೆಗೆ ಅವನ ರಾಜ್ಯ ವಿಸ್ತರಣೆಯಾಗಿತ್ತು. ಮುಮ್ಮಡಿ ಸಿಂಗನಾಯಕನು ವೃದ್ಧಾಪ್ಯದಿಂದ ಮರಣ ಹೊಂದಿದಾಗ ಆತನ ಮಗ ಕಂಪಿಲನಿಗೆ ಇನ್ನೂ ಎಳೆಯ ವಯಸ್ಸು. ತಾಯಿ ಮಾದನಾಗತಿ ಧೈರ್ಯಗೆಡದೆ ಮಗನನ್ನು ಬೆಳೆಸಿದಳು. ಮಂತ್ರಿ ಬೈಚಪ್ಪನೂ ಕೂಡ ರಾಜ್ಯ ಅನಾಯಕನಾಗದಂತೆ ದಕ್ಷತೆಯಿಂದ ನೋಡಿಕೊಂಡನು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ರಾಜ್ಯಕ್ಕೆ ಕ್ಷಾಮ ಬಂದು ಹನೆಯ ದುರ್ಗದ

ಸುತ್ತಲೂ ಹಸಿರು ಒಣಗಿತು. ಮಳೆ ಬೆಳೆ ಆಗದೆ ದವಸ ಧಾನ್ಯಗಳ ಸುಳಿವಿಲ್ಲ. ಪಶು ಪಕ್ಷಿಗಳೆಲ್ಲ ಮೇವು ನೀರಿಲ್ಲದೆ ಒದ್ದಾಡಿ ಸತ್ತವು. ರಾಣಿ ಮತ್ತು ಮಂತ್ರಿ ಬೈಚಪ್ಪ ಪ್ರಜಾಜನರೊಡನೆ ಉತ್ತರಕ್ಕೆ ವಲಸೆ ಹೋಗಿ ಜಟ್ಟಂಗಿ ರಾಮಗಿರಿಯ ಬುಡದಲ್ಲಿ ಬಿಡು ಬಿಟ್ಟರು. ಅಲ್ಲಿಂದ ವಿಸ್ತಾರವಾದ ಹೊಸಮಲೆಯ ಅರಣ್ಯಕ್ಕೆ ಕಂಪಿಲನ ಪರಿವಾರ ಪಯಣಿಸಿತು. ಇದು ಮುಂದೆ ಹೊಸಮಲೆ ದುರ್ಗವೆಂದೆ ಹೆಸರಾಯಿತು. ಹೊಸಮಲೆ ರಾಜ್ಯಕ್ಕೆ ಕಂಪಿಲನೇ ರಾಜನಾದನು. ಹರಿಯಾಲದೇವಿ ಕಂಪಿಲನ ಪಟ್ಟದ ರಾಣಿಯಾದಳು. ಈ ರಾಜ ದಂಪತಿ ಕುಲದೇವರಾದ ಜಟ್ಟಂಗಿ ರಾಮೇಶ್ವರನಿಗೆ ಭಕ್ತಿಯಿಂದ ನಡೆದುಕೊಂಡರು. ತಮಗೆ ಪುರುಷೋತ್ತಮನಾದ ಪ್ರಭು ರಾಮಚಂದ್ರನಂತಿರುವ ಪುತ್ರ ಜನಿಸಲೆಂದು ಬೇಡಿಕೊಂಡರು. ಅದರಂತೆ ಗಂಡು ಮಗುವಿನ ಜನನವಾಯಿತು. ಈ ಮಗುವಿಗೆ ಕುಮಾರರಾಮನೆಂದು ನಾಮಕರಣ ಮಾಡಿದರು. ಇವನು ಓದು ಬರೆಹ ಕ್ಷತ್ರಿಯೋಚಿತ ವಿದ್ಯೆಗಳನ್ನು ಕರಗತ ಮಾಡಿಕೊಂಡನು. ೧೬ ವರ್ಷ ಕಳೆಯುವ ವೇಳೆಗೆ ಅಂಗಸಾಧನೆ, ಗಜತುರಗದೇರಾಟ ಶರಪ್ರಯೋಗ ಹಾಗೂ ಕತ್ತಿವರಸೆಗಳಲ್ಲಿ ಪ್ರವೀಣನಾದನು. ಕುಮಾರರಾಮನು ಯುದ್ಧ ವಿದ್ಯೆ ಮಾತ್ರವಲ್ಲ, ಸದ್ಗುಣಗಳನ್ನು ರೂಢಿಸಿಕೊಂಡನು. ದೇವರು ದೇಶ ಧರ್ಮ ಗುರುಹಿರಿಯರ ವಿಷಯದಲ್ಲಿ ವಿನಮ್ರತೆಯಿಂದ ವರ್ತಿಸುವ ಬಗೆಯನ್ನು ಕಲಿತುಕೊಂಡನು. ಕುಮಾರರಾಮನ ಕೀರ್ತಿ ಗಿರಿ ಕಾನನ ದಾಟಿ ನೆರೆ ರಾಜ್ಯಗಳಲ್ಲೂ ವ್ಯಾಪಿಸಿತು. ಈತನ ಹೆಸರು ಕೇಳಿದರೆ ಹಗೆಗಳ ಹೃದಯ ಕಂಪಿಸುತ್ತಿತ್ತು.

ಪ್ರಶ್ನೆಗಳು :

ಅ. ಕುಮಾರರಾಮನು ಯಾವ ಯಾವ ವಿದ್ಯೆಗಳನ್ನು ರೂಢಿಸಿಕೊಂಡನು?

ಆ. ಕಂಪಿಲ ದಂಪತಿಗಳಿಗೆ ಕುಮಾರರಾಮನ ಜನನವಾದ ಬಗೆಯನ್ನು ತಿಳಿಸಿ.

ಉತ್ತರ :

ಅ. ಕುಮಾರರಾಮನು ಓದು ಬರೆಹ ಕ್ಷತ್ರಿಯೋಚಿತ ವಿದ್ಯೆಗಳನ್ನು ಕರಗತ ಮಾಡಿಕೊಂಡನು. ೧೬ ವರ್ಷ ಕಳೆಯುವ ವೇಳೆಗೆ ಅಂಗಸಾಧನೆ ಗಜತುರಗದೇರಾಟ, ಶರಪ್ರಯೋಗ ಹಾಗೂ ಕತ್ತಿ ವರಸೆಗಳಲ್ಲಿ ಪ್ರವೀಣನಾದನು. ಯುದ್ಧ ವಿದ್ಯೆ ಮಾತ್ರವಲ್ಲ ಸದ್ಗುಣಗಳನ್ನು ರೂಢಿಸಿಕೊಂಡನು. ದೇವರು ದೇಶ ಧರ್ಮ ಗುರುಹಿರಿಯರ ವಿಷಯದಲ್ಲಿ ವಿನಮ್ರತೆಯಿಂದ ವರ್ತಿಸುವುದನ್ನು ಕಲಿತುಕೊಂಡನು.

ಆ. ಕಪಿಲ ರಾಜ ಮತ್ತು ರಾಣಿ ಹರಿಯಾಲದೇವಿ ದಂಪತಿ ಕುಲದೇವರಾದ ಜಟ್ಟಂಗಿ ರಾಮೇಶನಿಗೆ ಶ್ರದ್ಧಾ ಭಕ್ತಿಯಿಂದ ನಡೆದುಕೊಂಡರು. ತಮಗೆ ಪುರುಷೋತ್ತಮನಾದ ಪ್ರಭು ರಾಮಚಂದ್ರನಂತಿರುವ ಪುತ್ರ ಜನಿಸಲೆಂದು ಬೇಡಿಕೊಂಡರು. ಅದರಂತೆ ಗಂಡು ಮಗುವಿನ ಜನನವಾಯಿತು. ಈ ಮಗುವಿಗೆ ಕುಮಾರರಾಮ ಎಂದು ನಾಮಕರಣ ಮಾಡಿದರು.

XIV. ಪತ್ರಲೇಖನ ಬರೆಯುವುದು : **1 X 5 = 5**

44. ನಿಮ್ಮನ್ನು ತುಮಕೂರಿನ ಸಿದ್ಧಗಂಗಾ ನಗರದಲ್ಲಿ ವಾಸವಿರುವ **'ರಾಕೇಶ'** ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಎದುರಿಸುತ್ತಿರುವ ಕಸ ವಿಲೇವಾರಿ ಸಮಸ್ಯೆಯನ್ನು ಕುರಿತು, ನಗರ ಪಾಲಿಕೆಯ ಮುಖ್ಯಾಧಿಕಾರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ **'ಸಹನಾ'** ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಕನ್ನಡ ಸಂಘದಿಂದ ಆಯೋಜಿಸಿದ ಕನ್ನಡ ಭಾವಗೀತೆಗಳ ಗಾಯನ ಸ್ಪರ್ಧೆಯನ್ನು ಕುರಿತು ರಾಯಚೂರಿನ ಗಾಂಧಿನಗರದಲ್ಲಿ ವಾಸವಾಗಿರುವ 'ಸಂಜನಾ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.

ಉತ್ತರ :

ಸ್ಥಳ : ತುಮಕೂರು
ದಿನಾಂಕ : ೨೫. ೦೬. ೨೦೨೬

ಇವರಿಂದ,
ರಾಕೇಶ
ಸಿದ್ಧಗಂಗಾನಗರ
ತುಮಕೂರು

ಇವರಿಗೆ,
ಮಾನ್ಯ ಮುಖ್ಯಾಧಿಕಾರಿಗಳು
ನಗರಪಾಲಿಕೆ
ತುಮಕೂರು

ಮಾನ್ಯರೆ,

ವಿಷಯ : ಸಮರ್ಪಕವಾಗಿ ಕಸ ವಿಲೇವಾರಿ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತುಮಕೂರಿನ ಸಿದ್ಧಗಂಗಾ ನಗರದ ನಿವಾಸಿ ರಾಕೇಶ ಎಂಬ ಹೆಸರಿನವನಾದ ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ, ಬಡಾವಣೆಯಲ್ಲಿ ಕಳೆದ ಕೆಲವು ದಿನಗಳಿಂದ ಕಸವನ್ನು ಸಂಗ್ರಹಿಸುವ ನಗರಪಾಲಿಕೆಯ ವಾಹನಗಳು ಸರಿಯಾಗಿ ಬರುತ್ತಿಲ್ಲ. ಇದರಿಂದಾಗಿ ರಸ್ತೆಯ ಬದಿಯಲ್ಲಿ ಕಸದ ರಾಶಿ ಬಿದ್ದಿದ್ದು, ತುಂಬಾ ವಾಸನೆ ಹರಡುತ್ತಿದೆ. ಈಗ ಮಳೆಗಾಲ ಕೂಡ ಇರುವುದರಿಂದ ಕಸದ ರಾಶಿಯಲ್ಲಿ ಸೊಳ್ಳೆಗಳು ಮತ್ತು ನೊಣಗಳು ಹೆಚ್ಚಾಗಿವೆ. ಇದು ಈ ಭಾಗದ ಜನರಲ್ಲಿ ಸಾಂಕ್ರಾಮಿಕ ರೋಗಗಳನ್ನು ಹರಡುವ ಭೀತಿ ಹೆಚ್ಚಿಸಿದೆ. ಸಾರ್ವಜನಿಕರು, ಶಾಲಾ ಮಕ್ಕಳು ಈ ರಸ್ತೆಯ ಮಾರ್ಗವಾಗಿ ಸಂಚರಿಸಬೇಕಾಗಿರುವುದರಿಂದ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ತಾವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಕಸವನ್ನು ವಿಲೇವಾರಿ ಮಾಡಲು ಮತ್ತು ಪ್ರತಿನಿತ್ಯ ನಿಯಮಿತವಾಗಿ ಕಸವನ್ನು ಸಂಗ್ರಹಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
ರಾಕೇಶ
(ಬಡಾವಣೆಯ ಪ್ರಮುಖರ ಸಹಿಗಳಿವೆ)

ಹೊರ ವಿಳಾಸ :

ಇವರಿಗೆ, ಮಾನ್ಯ ಮುಖ್ಯಾಧಿಕಾರಿಗಳು ನಗರಪಾಲಿಕೆ ತುಮಕೂರು	ಇವರಿಂದ, ರಾಕೇಶ ಸಿದ್ಧಗಂಗಾನಗರ ತುಮಕೂರು

ಅಥವಾ

ಉತ್ತರ : ಕ್ಷೇಮ

ಶ್ರೀ

ಇವರಿಂದ,
ಸಹನಾ
೧೦ ನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ಬೆಳಗಾವಿ
ದಿನಾಂಕ : ೦೨.೧೧.೨೦೨೬

ಮಾತೋಶ್ರೀಯರವರಿಗೆ,

ನಿಮ್ಮ ಮಗಳಾದ ಸಹನಾ ಮಾಡುವ ನಮಸ್ಕಾರಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನೀವು ಅಲ್ಲಿ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.

ನನ್ನ ವಿದ್ಯಾಭ್ಯಾಸ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ನಿಮ್ಮ ಆಸೆಯಂತೆ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಲು ವೇಳಾಪಟ್ಟಿ ತಯಾರಿಸಿಕೊಂಡು ಓದುತ್ತಿದ್ದೇನೆ. ಈ ವರ್ಷ ವಾರ್ಷಿಕ ಪರೀಕ್ಷೆಯಲ್ಲಿ ಖಂಡಿತಾ ಒಳ್ಳೆಯ ಅಂಕಗಳಿಸುತ್ತೇನೆ. ಈ ಪತ್ರವನ್ನು ಬರೆದ ಕಾರಣವೇನೆಂದರೆ, ಶಾಲೆಯಲ್ಲಿ ಕನ್ನಡ ಸಂಘದಿಂದ 'ಕನ್ನಡ ಭಾವಗೀತೆಗಳ ಗಾಯನ ಸ್ಪರ್ಧೆ'ಯನ್ನು ಆಯೋಜಿಸಿದ್ದರು. ಕನ್ನಡದ ಪ್ರಮುಖ ಕವಿಗಳ ಗೀತೆಗಳನ್ನು ಹಾಡುವ ಸ್ಪರ್ಧೆ ಇದಾಗಿತ್ತು. ಈ ಭಾವಗೀತೆ ಗಾಯನ ಸ್ಪರ್ಧೆಯಲ್ಲಿ ನಾನು ಕೂಡ ಭಾಗವಹಿಸಿದ್ದೆ. ನಾನು ಕುವೆಂಪು ಅವರ ಪ್ರಸಿದ್ಧ ಭಾವಗೀತೆ 'ತನುವು ನಿನ್ನದು' ಗೀತೆಯನ್ನು ಹಾಡಿ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಹಾಗೂ ಬಹುಮಾನವನ್ನು ಪಡೆದೆನು. ಊರಲ್ಲಿ ನೀನು ನನಗೆ ಸಂಗೀತ ತರಬೇತಿಯನ್ನು ಕೊಡಿಸಿದ್ದು ನನಗೆ ತುಂಬಾ ಅನುಕೂಲವಾಯಿತು. ಊರಿಗೆ ಬಂದಾಗ ಬಹುಮಾನವನ್ನು ತೋರಿಸುತ್ತೇನೆ.

ಮನೆಯಲ್ಲಿ ತಂದೆಯವರಿಗೂ ನನ್ನ ನಮಸ್ಕಾರಗಳನ್ನು ತಿಳಿಸು.

ಇಂತಿ ನಿಮ್ಮ ಪ್ರೀತಿಯ ಮಗಳು
ಸಹನಾ

ಹೊರ ವಿಳಾಸ :

ಇವರಿಗೆ, ಸಂಜನಾ ಗಾಂಧಿನಗರ ರಾಯಚೂರು	ಇವರಿಂದ, ಸಹನಾ ೧೦ ನೆಯ ತರಗತಿ, ಸರ್ಕಾರಿ ಪ್ರೌಢಶಾಲೆ, ಬೆಳಗಾವಿ

XV. ಪ್ರಬಂಧ ಬರೆವಣಿಗೆ : **1 X 5 = 5**

45. ರಾಷ್ಟ್ರೀಯ ಭಾವೈಕ್ಯ.

ಅಥವಾ

ಜಾಗತಿಕ ಯುದ್ಧಗಳಿಂದ ಸಾಮಾನ್ಯ ಜನರ ಮೇಲೆ ಆಗುವ ಪರಿಣಾಮ.

ಉತ್ತರ : ರಾಷ್ಟ್ರೀಯ ಭಾವೈಕ್ಯ :

ಪೀಠಿಕೆ : ರಾಷ್ಟ್ರೀಯ ಭಾವೈಕ್ಯ ಎಂದರೆ ಒಂದು ದೇಶದ ಜನರು ಭಾಷೆ, ಧರ್ಮ, ಜಾತಿ, ಮತ್ತು ಸಂಸ್ಕೃತಿಗಳ ವೈವಿಧ್ಯತೆಯ ನಡುವೆಯೂ ತಾವೆಲ್ಲರೂ ಒಂದೇ ಎಂಬ ಒಗ್ಗಟ್ಟಿನ ಭಾವನೆಯನ್ನು ಹೊಂದಿರುವುದಾಗಿದೆ. ಭಾರತದಂತಹ ವಿಶಾಲ ಮತ್ತು ವೈವಿಧ್ಯಮಯ ದೇಶಕ್ಕೆ ಈ ಭಾವನೆ ಅತ್ಯಂತ ಪ್ರಮುಖವಾಗಿದೆ. **"ವೈವಿಧ್ಯತೆಯಲ್ಲಿ ಏಕತೆ"** ಎಂಬುದು ನಮ್ಮ ದೇಶದ ಮೂಲಮಂತ್ರವಾಗಿದ್ದು, ರಾಷ್ಟ್ರೀಯ ಭಾವೈಕ್ಯ ದೇಶದ ಪ್ರಗತಿ ಮತ್ತು ಶಾಂತಿಗೆ ಅಡಿಪಾಯವಾಗಿದೆ.

ವಿಷಯ ನಿರೂಪಣೆ : ಭಾರತವು ವಿವಿಧ ಸಂಸ್ಕೃತಿಗಳ ತವರೂರು. 'ವಸುದೈವ ಕುಟುಂಬಕಂ' 'ಸರ್ವೇ ಜನಾಃ ಸುಖಿನೋ ಭವಂತು' ಎಂಬುದು ಭಾರತೀಯ ಸಂಸ್ಕೃತಿ. ಇಲ್ಲಿ ನೂರಾರು ಭಾಷೆಗಳು, ಹಲವಾರು ಧರ್ಮಗಳು ಮತ್ತು ವೈವಿಧ್ಯಮಯ ಆಚರಣೆಗಳಿವೆ. ವಿವಿಧತೆಯಲ್ಲಿ ಏಕತೆಯೇ ದೇಶದ ಶಕ್ತಿ. ಪ್ರಾಚೀನ ಕಾಲದಿಂದಲೂ ಸಹಬಾಳ್ವೆ ಸಹಿಷ್ಣುತೆಯನ್ನು ಭಾರತವು ಬೋಧಿಸುತ್ತಾ ಪಾಲಿಸುತ್ತಾ ಬಂದಿದೆ. ಭಿನ್ನತೆಗಳಿದ್ದರೂ ನಾವೆಲ್ಲರೂ 'ಭಾರತೀಯರು' ಎಂಬ ಹೆಮ್ಮೆಯ ಭಾವನೆ ನಮ್ಮನ್ನು ಒಟ್ಟಿಗೆ ಹಿಡಿದಿಟ್ಟಿದೆ. ದೇಶದ ಆಂತರಿಕ ಭದ್ರತೆ ಮತ್ತು ಬಾಹ್ಯ ಆಕ್ರಮಣಗಳನ್ನು ಎದುರಿಸಲು ಈ ಒಗ್ಗಟ್ಟು ಅತಿ ಅಗತ್ಯ. ಜನರ ನಡುವೆ ಸೌಹಾರ್ದತೆ ಇದ್ದಾಗ ಮಾತ್ರ ದೇಶವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಕೆಲವೊಮ್ಮೆ ವೈವಿಧ್ಯತೆಯ ಕಾರಣದಿಂದ ದೇಶದ ಶಾಂತಿ ಹಾಳಾಗುವುದುಂಟು. ಇದರಿಂದ ಕೆಲವು ಪ್ರಮುಖ ಸವಾಲುಗಳು ಎದುರಾಗುತ್ತಿವೆ.

ಕೋಮುವಾದ : ಧರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸುವ ಶಕ್ತಿಗಳು ದೇಶದ ಶಾಂತಿಗೆ ಧಕ್ಕೆ ತರುತ್ತಿವೆ.

ಜಾತಿ ಪದ್ಧತಿ : ಮೇಲು–ಕೀಳು ಎಂಬ ಭಾವನೆ ಮತ್ತು ಜಾತಿಯ ಆಧಾರದ ಮೇಲಿನ ತಾರತಮ್ಯಗಳು ಸಮಾಜವನ್ನು ಒಡೆಯುತ್ತಿವೆ.

ಪ್ರಾಂತೀಯತೆ ಮತ್ತು ಭಾಷಾಭಿಮಾನ : ತಮ್ಮ ಪ್ರದೇಶ ಅಥವಾ ಭಾಷೆ ಮಾತ್ರ ಶ್ರೇಷ್ಠ ಎಂಬ ಅತಿಯಾದ ಹಠ ದೇಶದ ಒಗ್ಗಟ್ಟಿಗೆ ಮಾರಕವಾಗಿದೆ.

ರಾಜಕೀಯ ಸ್ವಾರ್ಥ : ಕೆಲವು ರಾಜಕಾರಣಿಗಳು ತಮ್ಮ ವೈಯಕ್ತಿಕ ಲಾಭಕ್ಕಾಗಿ ಜನರ ಭಾವನೆಗಳನ್ನು ಕೆರಳಿಸಿ ಒಡಕನ್ನು ಉಂಟುಮಾಡುತ್ತಾರೆ.

ರಾಷ್ಟ್ರೀಯ ಭಾವೈಕ್ಯವನ್ನು ಬಲಪಡಿಸಲು ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಾಗಿದೆ.

ಶಿಕ್ಷಣದ ಪಾತ್ರ : ಶಾಲಾ–ಕಾಲೇಜುಗಳಲ್ಲಿ ಮಕ್ಕಳಿಗೆ ಬಾಲ್ಯದಿಂದಲೇ ಎಲ್ಲಾ ಧರ್ಮ, ಭಾಷೆ ಮತ್ತು ಸಂಸ್ಕೃತಿಗಳನ್ನು ಗೌರವಿಸುವುದನ್ನು ಕಲಿಸಬೇಕು. ಪಠ್ಯಪುಸ್ತಕಗಳಲ್ಲಿ ದೇಶಪ್ರೇಮ ಮತ್ತು ಒಗ್ಗಟ್ಟಿನ ಪಾಠಗಳಿರಬೇಕು.

ರಾಷ್ಟ್ರೀಯ ಹಬ್ಬಗಳ ಆಚರಣೆ : ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಮತ್ತು ಗಾಂಧಿ ಜಯಂತಿಗಳಂತಹ ರಾಷ್ಟ್ರೀಯ ಹಬ್ಬಗಳನ್ನು ಜಾತಿ–ಮತ ಬೇಧವಿಲ್ಲದೆ ಎಲ್ಲರೂ ಒಟ್ಟಾಗಿ ಆಚರಿಸಬೇಕು. ಇದು ಭಾರತೀಯರೆಂಬ ಭಾವನೆಯನ್ನು ಮೂಡಿಸುತ್ತದೆ.

ಸಂವಹನ ಮತ್ತು ಪ್ರವಾಸ : ದೇಶದ ವಿವಿಧ ಭಾಗಗಳಿಗೆ ಪ್ರವಾಸ ಮಾಡುವುದರಿಂದ ಮತ್ತು ಬೇರೆ ಪ್ರದೇಶದ ಜನರೊಂದಿಗೆ ಸಂವಹನ ನಡೆಸುವುದರಿಂದ ಪರಸ್ಪರರ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಮಾಧ್ಯಮಗಳ ಜವಾಬ್ದಾರಿ : ಚಲನಚಿತ್ರಗಳು, ದೂರದರ್ಶನ ಮತ್ತು ಸಾಮಾಜಿಕ ಮಾಧ್ಯಮಗಳು ದ್ವೇಷವನ್ನು ಹರಡುವ ಬದಲು ಸೌಹಾರ್ದತೆ ಮತ್ತು ದೇಶಪ್ರೇಮವನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡಬೇಕು.

ಉಪಸಂಹಾರ : ರಾಷ್ಟ್ರೀಯ ಭಾವೈಕ್ಯ ಕೇವಲ ಒಂದು ಪರಿಕಲ್ಪನೆಯಲ್ಲ; ಅದು ದೇಶದ ಜೀವಾಳವಾಗಿದೆ. ಒಂದು ದೇಶದ ನಿಜವಾದ ಶಕ್ತಿ ಇರುವುದು ಅಲ್ಲಿನ ಆಯುಧಗಳಲ್ಲಲ್ಲ, ಬದಲಾಗಿ ಜನರ ನಡುವಿನ ಒಗ್ಗಟ್ಟಿನಲ್ಲಿ. ನಾವೆಲ್ಲರೂ ಭಿನ್ನಾಭಿಪ್ರಾಯಗಳನ್ನು ಮರೆತು, **"ನಾವೆಲ್ಲರೂ ಒಂದು, ನಾವೆಲ್ಲರೂ ಭಾರತೀಯರು"** ಎಂಬ ಮನೋಭಾವನೆಯನ್ನು ಬೆಳೆಸಿಕೊಂಡಾಗ ಮಾತ್ರ ಭಾರತವು ಜಗತ್ತಿನ ಬಲಿಷ್ಠ ಮತ್ತು ಶಾಂತಿಯುತ ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯ. ಕಣ್ಣು ಬೇರೆ ನೋಟ ಒಂದು. ಭಾಷೆ ಬೇರೆ ಭಾವ ಒಂದು. ಮೊದಲು ರಾಷ್ಟ್ರ ನಂತರ ಜಾತಿ–ಕುಲ–ಧರ್ಮ–ಭಾಷೆ–ಪ್ರಾಂತ್ಯಗಳೆಲ್ಲ ಎಂದು ಭಾವಿಸೋಣ. ನಾವೆಲ್ಲರೂ ಭಾರತೀಯರು ಒಂದಾಗಿ ಬಾಳಿದಾಗ ದೇಶ ಅಭಿವೃದ್ಧಿಯಾಗುವುದು ಮತ್ತು ವಿಶ್ವಮಾನ್ಯ ರಾಷ್ಟ್ರವಾಗುವುದು ಎಂಬುದು ನನ್ನ ಅಭಿಪ್ರಾಯವಾಗಿದೆ.

"ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ"

ಅಥವಾ

ಉತ್ತರ : ಜಾಗತಿಕ ಯುದ್ಧಗಳಿಂದ ಸಾಮಾನ್ಯ ಜನರ ಮೇಲೆ ಆಗುವ ಪರಿಣಾಮ :

ಪೀಠಿಕೆ : "ಯುದ್ಧವು ದೇಶಗಳ ಗಡಿಯನ್ನು ಬದಲಾಯಿಸಬಹುದು, ಆದರೆ ಅದು ಇಡೀ ಮಾನವಕುಲದ ಭವಿಷ್ಯವನ್ನೇ ಕತ್ತಲಿಗೆ ತಳ್ಳುತ್ತದೆ." ಜಗತ್ತಿನ ಇತಿಹಾಸವನ್ನು ಅವಲೋಕಿಸಿದಾಗ ಯುದ್ಧ ಎಂಬುದು ಮಾನವ ನಾಗರಿಕತೆ ಮಾಡಿಕೊಂಡ ಅತಿ ದೊಡ್ಡ ತಪ್ಪು ಎಂಬುದು ಸ್ಪಷ್ಟವಾಗುತ್ತದೆ. ಇತಿಹಾಸದಲ್ಲಿ ನಡೆದಿರುವ ಮೊದಲ ಮತ್ತು ಎರಡನೇ ಜಾಗತಿಕ ಯುದ್ಧಗಳು ಹಾಗೂ ಇತ್ತೀಚಿನ ರಷ್ಯಾ–ಉಕ್ರೇನ್ ಮತ್ತು ಇಸ್ರೇಲ್–ಪ್ಯಾಲೆಸ್ತೇನ್ ಸಂಘರ್ಷಗಳು ಇದನ್ನು ಸಾಬೀತುಪಡಿಸಿವೆ. ಯುದ್ಧವು ಕೇವಲ ಸೇನೆಗಳ ನಡುವಿನ ಹೋರಾಟವಾಗಿ ಉಳಿಯದೆ, ಸಾಮಾನ್ಯ ಜನರ ನೆಮ್ಮದಿ, ಹಕ್ಕುಗಳು ಮತ್ತು ಬದುಕುವ ಆಸೆಯನ್ನೇ ಹೊಸಕಿ ಹಾಕುವ ಒಂದು ಜಾಗತಿಕ ಪಿಡುಗಾಗಿದೆ.

ವಿಷಯ ನಿರೂಪಣೆ : ಯುದ್ಧವನ್ನು ಘೋಷಿಸುವವರು ರಾಜಕೀಯ ನಾಯಕರು ಮತ್ತು ಶಸ್ತ್ರಾಸ್ತ್ರಗಳನ್ನು ತಯಾರಿಸುವ ಬಂಡವಾಳಶಾಹಿಗಳು. ಅವರು ಬಂಕರ್‌ಗಳಲ್ಲೋ ಅಥವಾ ಸುರಕ್ಷಿತ ಕೋಣೆಗಳಲ್ಲೋ ಕುಳಿತು ಆದೇಶಗಳನ್ನು ನೀಡುತ್ತಾರೆ. ಆದರೆ ಯುದ್ಧದ ಭೀಕರ ಪರಿಣಾಮವನ್ನು, ಯಾವುದೇ ತಪ್ಪಿಲ್ಲದೆ ರಸ್ತೆಗೆ ಬೀಳುವ ಸಾಮಾನ್ಯ ನಾಗರಿಕರು, ಹಸುಗೂಸುಗಳು, ಮಹಿಳೆಯರು ಮತ್ತು ವೃದ್ಧರು ತಮ್ಮ ರಕ್ತ ಮತ್ತು ಕಣ್ಣೀರಿನ ಮೂಲಕ ಅನುಭವಿಸಬೇಕಾಗುತ್ತದೆ.

1. ಅಪಾರ ಜೀವಹಾನಿ ಮತ್ತು ಕುಟುಂಬಗಳ ನಾಶ : ಜಾಗತಿಕ ಯುದ್ಧಗಳು ತರುವ ಮೊದಲ ದುರಂತವೆಂದರೆ ಅಮಾಯಕ ಜನರ ಸಾವು. ಬಾಂಬ್ ದಾಳಿಗಳು, ಕ್ಷಿಪಣಿ ಹಲ್ಲೆಗಳು ಮತ್ತು ಗುಂಡಿನ ಚಕಮಕಿಯಲ್ಲಿ ಲಕ್ಷಾಂತರ ಸಾಮಾನ್ಯ ನಾಗರಿಕರು, ಮಹಿಳೆಯರು ಮತ್ತು ಮಕ್ಕಳು ಪ್ರಾಣ ಕಳೆದುಕೊಳ್ಳುತ್ತಾರೆ. ಕೇವಲ ಜೀವಹಾನಿ ಮಾತ್ರವಲ್ಲದೆ, ಲಕ್ಷಾಂತರ ಜನರು ತಮ್ಮ ಕೈಕಾಲುಗಳನ್ನು ಕಳೆದುಕೊಂಡು ಜೀವಿತಾವಧಿಯವರೆಗೆ ವಿಕಲಾಂಗರಾಗುತ್ತಾರೆ. ಕುಟುಂಬದ ಆಧಾರಸ್ತಂಭವಾಗಿದ್ದ ವ್ಯಕ್ತಿಗಳು ಮರಣ ಹೊಂದುವುದರಿಂದ ಇಡೀ ಕುಟುಂಬಗಳು ಬೀದಿಗೆ ಬೀಳುತ್ತವೆ. ಸಾವಿರಾರು ಮಕ್ಕಳು ಅನಾಥರಾಗುತ್ತಾರೆ ಮತ್ತು ಅಸಂಖ್ಯಾತ ಮಹಿಳೆಯರು ವಿಧವೆಯರಾಗಿ ಅತ್ಯಂತ ದಯನೀಯ ಜೀವನ ನಡೆಸಬೇಕಾಗುತ್ತದೆ.

2. ನಿರಾಶ್ರಿತರ ಸಮಸ್ಯೆ ಮತ್ತು ವಲಸೆ : ಯುದ್ಧದ ಸಮಯದಲ್ಲಿ ಸಾಮಾನ್ಯ ಜನರು ತಮ್ಮ ಸ್ವಂತ ಮನೆ, ಆಸ್ತಿ ಮತ್ತು ಹುಟ್ಟಿದ ಊರನ್ನು ಬಿಟ್ಟು ಜೀವ ಉಳಿಸಿಕೊಳ್ಳಲು ಓಡಿಹೋಗಬೇಕಾಗುತ್ತದೆ. ಇದರಿಂದಾಗಿ ಜಗತ್ತಿನಲ್ಲಿ ತೀವ್ರವಾದ 'ನಿರಾಶ್ರಿತರ ಸಮಸ್ಯೆ' ಸೃಷ್ಟಿಯಾಗುತ್ತದೆ. ಲಕ್ಷಾಂತರ ಜನರು ನೆರೆಯ ದೇಶಗಳಲ್ಲಿ ನಿರಾಶ್ರಿತರ ಶಿಬಿರಗಳಲ್ಲಿ ಅತ್ಯಂತ ಕನಿಷ್ಠ ಸೌಲಭ್ಯಗಳೊಂದಿಗೆ ಬದುಕಬೇಕಾಗುತ್ತದೆ. ತಮ್ಮದೇ ದೇಶದಲ್ಲಿ ಸ್ವಾವಲಂಬಿಗಳಾಗಿ ಬದುಕುತ್ತಿದ್ದವರು, ಬೇರೆ ದೇಶಗಳಲ್ಲಿ ಆಹಾರ ಮತ್ತು ಆಶ್ರಯಕ್ಕಾಗಿ ಭಿಕ್ಷುಕರಂತೆ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

3. ಆರ್ಥಿಕ ಕುಸಿತ, ಹಸಿವು ಮತ್ತು ಬಡತನ : ಜಾಗತಿಕ ಯುದ್ಧಗಳು ಇಡೀ ವಿಶ್ವದ ಆರ್ಥಿಕತೆಯನ್ನೇ ಬುಡಮೇಲು ಮಾಡುತ್ತವೆ. ಯುದ್ಧದ ದೇಶಗಳಲ್ಲಿ ಕಾರ್ಖಾನೆಗಳು, ಕೃಷಿ ಭೂಮಿ ಮತ್ತು ಮಾರುಕಟ್ಟೆಗಳು ಸಂಪೂರ್ಣವಾಗಿ ನಾಶವಾಗುತ್ತವೆ. ಇದರಿಂದಾಗಿ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತವೆ (ಹಣದುಬ್ಬರ). ಆಹಾರ ಧಾನ್ಯಗಳ ಕೊರತೆಯಿಂದಾಗಿ ತೀವ್ರವಾದ ಕ್ಷಾಮ ಮತ್ತು ಹಸಿವು ತಲೆದೋರುತ್ತದೆ. ಜನರು ಒಂದು ಹೊತ್ತಿನ ಗಂಜಿಗೂ ಪರದಾಡುವಂತಾಗುತ್ತದೆ. ನಿರುದ್ಯೋಗ ತಾಂಡವವಾಡುತ್ತದೆ ಮತ್ತು ಸಾಮಾನ್ಯ ಜನರು ತಲೆಮಾರುಗಳವರೆಗೆ ಚೇತರಿಸಿಕೊಳ್ಳಲಾಗದ ಬಡತನದ ಸುಳಿಗೆ ಸಿಲುಕುತ್ತಾರೆ.

4. ಮೂಲಸೌಕರ್ಯಗಳ ನಾಶ ಮತ್ತು ಆರೋಗ್ಯದ ಬಿಕ್ಕಟ್ಟು : ಯುದ್ಧದ ಭೀಕರತೆಗೆ ಶಾಲೆಗಳು, ಆಸ್ಪತ್ರೆಗಳು, ರಸ್ತೆಗಳು, ಕುಡಿಯುವ ನೀರಿನ ವ್ಯವಸ್ಥೆ ಮತ್ತು ವಿದ್ಯುತ್ ಸಂಪರ್ಕಗಳು ಸಂಪೂರ್ಣವಾಗಿ ಧ್ವಂಸಗೊಳ್ಳುತ್ತವೆ. ಗಾಯಗೊಂಡ ಜನರಿಗೆ ಚಿಕಿತ್ಸೆ ನೀಡಲು ಆಸ್ಪತ್ರೆಗಳಲ್ಲಿ ಔಷಧಿಗಳಿರುವುದಿಲ್ಲ. ವೈದ್ಯಕೀಯ ಸೌಲಭ್ಯಗಳ ಕೊರತೆ ಮತ್ತು ಕಲುಷಿತ ವಾತಾವರಣದಿಂದಾಗಿ ಸಾಂಕ್ರಾಮಿಕ ರೋಗಗಳು ವೇಗವಾಗಿ ಹರಡುತ್ತವೆ. ಇವುಗಳ ಜೊತೆಗೆ, ಯುದ್ಧದ ಭೀಕರ ದೃಶ್ಯಗಳನ್ನು ಕಣ್ಣಾರೆ ಕಂಡ ಸಾಮಾನ್ಯ ಜನರು ತೀವ್ರವಾದ ಮಾನಸಿಕ ಆಘಾತಕ್ಕೆ ಒಳಗಾಗಿರುತ್ತಾರೆ. ಈ ಮಾನಸಿಕ ಗಾಯಗಳು ದೈಹಿಕ ಗಾಯಗಳಿಗಿಂತಲೂ ದೀರ್ಘಕಾಲ ಕಾಡುತ್ತವೆ.

5. ಪರಿಸರ ಮಾಲಿನ್ಯ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ : ಆಧುನಿಕ ಯುದ್ಧಗಳಲ್ಲಿ ಬಳಸುವ ರಾಸಾಯನಿಕ ಅಸ್ತ್ರಗಳು, ಬಾಂಬುಗಳು ಮತ್ತು ಪರಮಾಣು ಅಸ್ತ್ರಗಳು ವಾಯು, ಜಲ ಮತ್ತು ಮಣ್ಣನ್ನು ನೂರಾರು ವರ್ಷಗಳವರೆಗೆ ಕಲುಷಿತಗೊಳಿಸುತ್ತವೆ. ಹಿರೋಷಿಮಾ ಮತ್ತು ನಾಗಾಸಾಕಿಯ ಉದಾಹರಣೆ ನಮ್ಮ ಮುಂದಿದೆ. ಇನ್ನು ಯುದ್ಧದ ಅರಾಜಕತೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳು, ಅತ್ಯಾಚಾರಗಳು ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗಳು ಮಿತಿಮೀರುತ್ತವೆ. ಸಾಮಾನ್ಯ ಜನರಿಗೆ ಬದುಕುವ ಹಕ್ಕೇ ಇಲ್ಲದಂತಾಗುತ್ತದೆ.

ಉಪಸಂಹಾರ : ಒಟ್ಟಾರೆಯಾಗಿ ಹೇಳುವುದಾದರೆ, ಜಾಗತಿಕ ಯುದ್ಧಗಳು ಗೆದ್ದ ದೇಶಕ್ಕೂ ಮತ್ತು ಸೋತ ದೇಶಕ್ಕೂ ಕೇವಲ ವಿನಾಶವನ್ನಷ್ಟೇ ತರುತ್ತವೆ. ಯುದ್ಧದಲ್ಲಿ ಯಾವುದೇ ದೇಶ ಗೆದ್ದರೂ, ಸೋಲುವುದು ಮಾತ್ರ ಸಾಮಾನ್ಯ ಮನುಷ್ಯ ಮತ್ತು ಮಾನವೀಯತೆ. ಹಿರಿಯರು ಹೇಳುವಂತೆ "ಯುದ್ಧದಿಂದ ಜಗತ್ತಿನ ಯಾವುದೇ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲು ಸಾಧ್ಯವಿಲ್ಲ". ಆದ್ದರಿಂದ ಜಾಗತಿಕ ನಾಯಕರು ತಮ್ಮ ಅಹಂಕಾರ ಮತ್ತು ಸಾಮ್ರಾಜ್ಯಶಾಹಿ ನೀತಿಯನ್ನು ಬದಿಗಿಟ್ಟು, ಶಾಂತಿ ಮತ್ತು ಮಾತುಕತೆಯ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಇಡೀ ಜಗತ್ತು ಶಾಂತಿಯಿಂದ ಬಾಳಿದಾಗ ಮಾತ್ರ ಸಾಮಾನ್ಯ ಜನರ ಬದುಕು ಹಸನಾಗಲು ಸಾಧ್ಯ.